DOP 15th of every month from Udupi HPO
ಬೆಲೆ ರೂ.2.50

**ಹೆಬ್ಬಾರ್ ಎಂಟರ್‌ಪ್ರೈಸಸ್**
ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101.
*ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್ ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.*
ಫೋನ್ : 2531493 (0), 2530851 (R), ಮೊಬೈಲ್ : 94484 37893

# ಶ್ರೀ ಶಾರದಾ

ಮಾಸಪತ್ರಿಕೆ - 15 ನವಂಬರ್ 2009
॥ ಧಿಯೋ ಯೋನಃ ಪ್ರಚೋದಯಾತ್ ॥
Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ - 576 102. ☎ 2520754
ಸಂಪುಟ-9 ಸಂಚಿಕೆ-11 ಪುಟಗಳು-6 Registered Under No.J/UDP/1260/2009-2011 Dated from 01-12-2008 to 30-11-2011.

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ - ವಾರ್ಷಿಕ ಮಹಾಸಭೆ

ಉಡುಪಿ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)ದ 2008-09ನೇ ಸಾಲಿನ ಮಹಾಸಭೆಯು ತಾ.08-11-2009ರಂದು ಪೂರ್ವಾಹ್ನ ಶ್ರೀಶಾರದಾ ಮಂಟಪದಲ್ಲಿ ಜರಗಿತು. ಶ್ರೀ ವೈ. ಮೋಹನ್‌ರಾವ್‌ರ ಪ್ರಾರ್ಥನೆಯೊಂದಿಗೆ ಪ್ರಾರಂಭವಾದ ಸಭೆಯಲ್ಲಿ ಅಧ್ಯಕ್ಷರಾದ ಸಿ.ಎಸ್.ರಾಯರು ಸಂಘವು ನಡೆದುಬಂದ ರೀತಿಯನ್ನು ತಿಳಿಸಿ ಎಲ್ಲರನ್ನೂ ಸ್ವಾಗತಿಸಿದರು. ಸಭೆಯು ವಿಷಯ ಸೂಚಿ ಯನ್ನು ಸರ್ವಾನುಮತದಿಂದ ಅಂಗೀಕರಿಸಿತು. ಕಾರ್ಯದರ್ಶಿ ಕೆ. ವೇಣು ಗೋಪಾಲ್ ರಾವ್ 2007-08ನೇ ಸಾಲಿನ ಸರ್ವಸದಸ್ಯರ ಸಭೆಯ ವರದಿ, 2008-09ನೇ ವರ್ಷದ ಚಟುವಟಿಕೆಗಳ ವರದಿ, ಆಯ ವ್ಯಯ ತಃಖ್ತೆ, ಆಸ್ತಿ-ಜವಾಬ್ದಾರಿ ತಃಖ್ತೆಗಳನ್ನು ಮಂಡಿಸಿ ಸರ್ವಾನುಮತದ ಅನುಮೋದನೆ ಪಡೆದರು. ನಂತರ ಸಂಘದ ಮಾಜಿ ಅಧ್ಯಕ್ಷ ಎಂ. ಪಾಲಚಂದ್ರರಾಯರು, ಎಂ.ಕೆ. ಮೋಹನ ರಾವ್ ಪಡುಬಿದ್ರಿ, ಬಾಲಚಂದ್ರ ರಾವ್ ಪಡುಬಿದ್ರಿ ಇವರ ಉಪಸ್ಥಿತಿಯಲ್ಲಿ ಮುಂದಿನ ಮೂರು ವರ್ಷಗಳ ಅವಧಿಗೆ ಆಡಳಿತ ಮಂಡಳಿ ಸದಸ್ಯರನ್ನು ಆಯ್ಕೆ ಮಾಡುವ ಚುನಾವಣಾ ಪ್ರಕ್ರಿಯೆಯನ್ನು ನಡೆಸಿಕೊಟ್ಟರು. ಮಹಾ ಸಭೆಯ ಸೂಚನೆ-ಅನುಮೋದನೆಯಲ್ಲಿ ಈ ಕೆಳಗಿನ ಸದಸ್ಯರು ಆಯ್ಕೆಯಾದರು.

ಶ್ರೀ ಸಿ.ಎಸ್. ರಾವ್ ಚಿಟ್ಪಾಡಿ, ವೇಣು ಗೋಪಾಲರಾವ್ ಅಂಬಲಪಾಡಿ, ಯು. ಪ್ರಫುಲ್ಲಚಂದ್ರ, ಕೃಷ್ಣಕುಮಾರ್‌ರಾವ್ ಮಟ್ಟು, ಡಾ। ವೈ. ಸುದರ್ಶನ ರಾವ್, ಬಿ. ಕೃಷ್ಣ ಮೂರ್ತಿರಾವ್ ಅಂಬಲಪಾಡಿ, ಪಿ.ಎಂ. ನಾಗರಾಜ್‌ರಾವ್ ಹಿರಿಯಡ್ಕ, ಅರವಿಂದ ಕುಮಾರ್, ಜಯರಾಮ ಶಾಸ್ತ್ರಿ ಪರ್ಕಳ, ಎಂ. ಸದಾನಂದ ರಾವ್ ಚಿಟ್ಪಾಡಿ, ವೈ.ಮೋಹನ ರಾವ್ ಅಂಬಲಪಾಡಿ, ಎಸ್.ಎಮ್.ರಾವ್ ತಂತ್ರಾಡಿ, ಸರ್ವಜ್ಞಮೂರ್ತಿ ಎಲ್ಲೂರು, ಭಾಗ್ಯಚಂದ್ರರಾವ್ ಅಲೆವೂರು, ವೈ.ಮುರಳೀ ಕೃಷ್ಣರಾವ್ ಇಂದ್ರಾಳಿ, ಟಿ.ಸುರೇಶ್‌ರಾವ್ ನಿಟ್ಟೂರು, ಕೆ. ವೆಂಕಟ್ರಾವ್ ಕರಂಬಳ್ಳಿ, ಡಾ। ಸೂರ್ಯನಾರಾಯಣರಾವ್ ಬೈಕಾಡಿ, ಸಿ.ದೇವರಾವ್ ಇಂದ್ರಾಳಿ, ವೈ.ಜಯಲಕ್ಷ್ಮೀ ಮುರಳೀಧರ ರಾವ್, ಬಿ. ಜಯರಾಮರಾವ್ ಉಡುಪಿ, ಡಾ। ವೈ.ರವೀಂದ್ರನಾಥ ರಾವ್ ಬ್ರಹ್ಮಾವರ, ವೈ. ಪ್ರಕಾಶ್‌ಕುಮಾರ್ ಇಂದ್ರಾಳಿ, ಮಂಜುನಾಥ ಹೆಬ್ಬಾರ್ ಉಡುಪಿ, ಉಷಾ ಶ್ಯಾನುಭಾಗ್ ಕುಂಜಿಬೆಟ್ಟು, ಸುಧಾಕರರಾವ್ ಪಡುಬಿದ್ರಿ.

ಅಂಬಲಪಾಡಿ ಕೃಷ್ಣರಾವ್ ಗೌರವಾಧ್ಯಕ್ಷ ರಾಗಿಯೂ, ಎಂ. ಪಾಲಚಂದ್ರರಾವ್ ಉಡುಪಿ, ಡಾ। ಪಿ. ವಿಠಲ ರಾವ್ ಮಣಿಪಾಲ, ರಮೇಶ್ ಶ್ಯಾನುಭಾಗ್ ಸತಾರ ಹಾಗೂ ವಾಸು ದೇವರಾವ್ ಬೆಳ್ಮಣ್ಣು ಇವರನ್ನು ಸಲಹಾ ಸಮಿತಿಯಲ್ಲಿ ಸೇರಿಸುವುದೆಂದು ನಿರ್ಧರಿಸ ಲಾಯಿತು. ಕೊನೆಯಲ್ಲಿ ಕೃಷ್ಣಕುಮಾರ್ ಮಟ್ಟು ಕೃತಜ್ಞತೆ ಸಲ್ಲಿಸಿದರು.

ಅಪರಾಹ್ನ ನಡೆದ ನೂತನ ಆಡಳಿತ

(...3ನೇ ಪುಟಕ್ಕೆ)

## ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರಿಂದ ಯಶಸ್ವೀ 2ನೇ ಪ್ರಯೋಗ ''ಜಾಂಬವತಿ ಕಲ್ಯಾಣ''

ತಾ.28-09-2009ರಂದು ವಿಜಯ ದಶಮಿಯ ಪ್ರಯುಕ್ತ ಶ್ರೀಶಾರದಾ ಮಂಟಪ ದಲ್ಲಿ ಸಂಜೆ 4-30ರಿಂದ 7-30ರ ವರೆಗೆ ''ಜಾಂಬವತಿ ಕಲ್ಯಾಣ'' ಯಕ್ಷಗಾನವು ಮನಸೂರೆಗೊಂಡಿತ್ತು. ಭಾಗವತರಾಗಿ ನಮ್ಮ ಸಮಾಜದವರೇ ಆದ ಶ್ರೀ ಪ್ರವೀಣ್‌ಕುಮಾರ್ ಕುಕ್ಕಿಕಟ್ಟೆ ಹಾಗೂ ಶ್ರೀ ಚಂದ್ರಕಾಂತರಾವ್ ಕಂಚಿನ ಕಂಠದ ಸುಶ್ರಾವ್ಯ ಹಾಡುಗಳಿಂದ ಜನಮನ ಗೆದ್ದರು. ಪೀಠಿಕಾ ಸ್ತ್ರೀ ಪ್ರವೇಶ, ಬಲರಾಮ ಕೃಷ್ಣರ ಪ್ರವೇಶ, ಜಾಂಬವಂತನ ಮತ್ತು ಕೃಷ್ಣನ ಸಂವಾದ, ಸಿಂಹದ ಆರ್ಭಟ, ಪ್ರಸೇನನ ಕುಣಿತ, ಕಿರಾತ ಪ್ರವೇಶ, ನಾರದರ ಪ್ರವೇಶ ಹಾಗೂ ಮಾತುಗಾರಿಕೆ, ಬಲರಾಮನ ಪಾತ್ರಕ್ಕೆ ಪೂರಕವಾದ ಮಾತುಗಾರಿಕೆ, ಕೃಷ್ಣನ ಪಾತ್ರಧಾರಿಗಳ ಕುಣಿತ ಹಾಗೂ ಜಾಂಬವಂತನ ಕುಣಿತ ಮತ್ತು ಮಾತುಗಾರಿಕೆ ಮನಮುಟ್ಟು ವಂತಿತ್ತು. ಹಿಮ್ಮೇಳದಲ್ಲಿ, ಚಂಡೆಯಲ್ಲಿ ರತ್ನಾಕರ ಆಚಾರ್, ಮದ್ದಳೆಯಲ್ಲಿ ರತ್ನಾಕರ ಶೆಣೈ ಭಾಗವಹಿಸಿದ್ದರು. ಉಡುಪಿ ಯಕ್ಷಗಾನ ಕೇಂದ್ರದ ಗುರು ಮಂಜುನಾಥ ಕುಲಾಲ್ ನಿರ್ದೇಶನ ಪಾತ್ರಧಾರಿಗಳ ಪಾತ್ರಪೋಷಣೆ ಯಲ್ಲಿ ಮಹತ್ವದ ಪಾತ್ರವಹಿಸಿತ್ತು.

ಶ್ರೀಶಾರದಾ ಮಂಟಪದಲ್ಲಿ ನಡೆದ ಈ ಪ್ರಥಮ ಪ್ರಯೋಗ ಯಶಸ್ವಿಯಾಗಿ 2ನೇ ಪ್ರಯೋಗವು ಶ್ರೀಕೃಷ್ಣ ಮಠದ ರಾಜಾಂಗಣ ದಲ್ಲಿ 18-10-2009ರಂದು ನಡೆಯಿತು. ಪರ್ಯಾಯ ಪುತ್ತಿಗೆ ಶ್ರೀಗಳು ಎಲ್ಲಾ ಕಲಾವಿದರಿಗೂ ಫಲಮಂತ್ರಾಕ್ಷತೆ ನೀಡಿ ಗೌರವಿಸಿದರು. ರಾಜಾಂಗಣದಲ್ಲಿ ನಡೆದ ಪ್ರಯೋಗದಲ್ಲಿ ಕೇಂದ್ರದ ಗುರುಗಳಾದ ಶ್ರೀ ಹೆಚ್. ಸತೀಶ ಕೆದ್ಲಾಯ, ನಮ್ಮವರೇ ಆದ ಶ್ರೀ ಪ್ರವೀಣಕುಮಾರ್ ಹಾಗೂ ಚಂದ್ರಕಾಂತ ರಾವ್ ಹೀಗೆ ಮೂರು ಭಾಗವತರೂ ತಮ್ಮ ಹಾಡುಗಾರಿಕೆಯನ್ನು ಉತ್ತಮ ರೀತಿಯಲ್ಲಿ ಪ್ರದರ್ಶಿಸಿದರು. ಮದ್ದಳೆಯಲ್ಲಿ ಯಕ್ಷಗಾನ ಕೇಂದ್ರದ ಗುರು ಶ್ರೀ ದೇವದಾಸ ರಾವ್ ಕೂಡ್ಲಿ ಹಾಗೂ ಚಂಡೆಯಲ್ಲಿ ಕೃಷ್ಣಮೂರ್ತಿ ಭಟ್ ಭಾಗವಹಿಸಿದ್ದರು.



### ಶ್ರೀ ಶಾರದಾ ದೇವಸ್ಥಾನ

ಕುಂಜಿಬೆಟ್ಟು, ಉಡುಪಿ-576 102

ಶ್ರೀಶಾರದಾ ದೇವಸ್ಥಾನದಲ್ಲಿ ಸಮಾಜ ಬಾಂಧವರ ಹಾಗೂ ಪರಿಸರದ ಭಕ್ತಾಭಿಮಾನಿಗಳ ಅಪೇಕ್ಷೆಯಂತೆ ತಾ.20-12-2009ನೇ ಆದಿತ್ಯವಾರ

**ಸಾಮೂಹಿಕ ಚಂಡಿಕಾಯಾಗವು**

ನಡೆಯಲಿರುವುದು.

**ಈ ಧಾರ್ಮಿಕ ಕಾರ್ಯಕ್ರಮದಲ್ಲಿ ಭಕ್ತ ಬಾಂಧವರೆಲ್ಲರೂ ಪಾಲ್ಗೊಂಡು ಶ್ರೀ ದುರ್ಗಾಮಾತೆಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.**

- ಚಂಡಿಕಾಯಾಗದ ಕರ್ತೃಗಳಾಗಲಿಚ್ಛಿಸುವವರು ದೇವಸ್ಥಾನದ ಅರ್ಚಕರ ಅಥವಾ ಶ್ರೀಶಾರದಾ ಮಂಟಪದ ಮ್ಯಾನೇಜರವರಲ್ಲಿ ರೂ.250/-ನ್ನು ನೀಡಿ ರಶೀದಿ ಪಡೆದುಕೊಳ್ಳಬೇಕಾಗಿ ವಿನಂತಿ.
- ಯಾಗಕ್ಕೆ ತುಪ್ಪ, ತೆಂಗಿನಕಾಯಿ, ಬಾಳೆಹಣ್ಣು, ವೀಳ್ಯದೆಲೆ, ಅಡಿಕೆ, ಗಂಧ, **ಹತ್ತಿ ನೂಲಿನ ಅಥವಾ ರೇಷ್ಮೆಯ** ರವಿಕೆ ಕಣ, ಸೀರೆ, ಯಾಗ ದ್ರವ್ಯಗಳು, ಸಮಿತ್ತು , ಪುಷ್ಪ, ತುಳಸಿ ತಂದಲ್ಲಿ ಯಾಗ ದೇವತೆಗೆ ಅರ್ಪಿಸುವ ಅವಕಾಶವಿದೆ.
- ಸೇವಾ ಕರ್ತೃಗಳು ಬೆಳಿಗ್ಗೆ ಗಂಟೆ 8-00ಕ್ಕೆ ಯಾಗ ಸಂಕಲ್ಪಕ್ಕಾಗಿ ಉಪಸ್ಥಿತರಿರಬೇಕಾಗಿ ವಿನಂತಿ. ಗಂಟೆ 11-30ಕ್ಕೆ ಯಾಗದ ಪೂರ್ಣಾಹುತಿ ನಡೆಯಲಿದೆ.

*ವಿ.ಸೂ. : ಕರ್ತೃಗಳಿಗೆ ಪ್ರತ್ಯೇಕವಾಗಿ ಯಾಗ ಪ್ರಸಾದ ನೀಡುವ ವ್ಯವಸ್ಥೆ ಇದೆ. (ರಶೀದಿ ತೋರಿಸಿ ಪಡೆದುಕೊಳ್ಳಬಹುದು) ಉಪಸ್ಥಿತಿ ಸಾಧ್ಯವಿಲ್ಲದ ಕರ್ತೃಗಳು ಮರುದಿನ ರಶೀದಿ ತೋರಿಸಿ ಶಾರದಾ ಮಂಟಪದ ಮ್ಯಾನೇಜರರಿಂದ ಪ್ರಸಾದ ಪಡೆದುಕೊಳ್ಳಬಹುದು.*

**- ವ್ಯವಸ್ಥಾಪಕರು.**

**ಸಂಪಾದಕ ಮಂಡಳಿ**

ವೈ. ಮೋಹನ ರಾವ್
ಯು. ಅರವಿಂದ ಕುಮಾರ್
ಎಚ್.ಎನ್. ಶ್ಯಾನುಭಾಗ್
ಟಿ. ವಿಶ್ವನಾಥ ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ
ಟಿ. ಸುರೇಶ ರಾವ್
ರೂಪಾ ವಸಂತ ರಾವ್
ಕೆ. ವೇಣುಗೋಪಾಲ ರಾವ್
ಯು. ಪ್ರಫುಲ್ಲಚಂದ್ರ ರಾವ್



ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಲೇಖನಗಳು ಅಥವಾ ಪತ್ರಿಕೆಯ ಇತರ ಯಾವುದೇ ವಿಷಯಗಳ ಬಗ್ಗೆ ಯಾವುದೇ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

-ಸಂ.


## ಚಿಂತನ

ಜೀವನದಲ್ಲಿ ಯಶಸ್ವೀ ಪುರುಷ/ಮಹಿಳೆ ಎನಿಸಿಕೊಳ್ಳಬೇಕಾದರೆ ಕೆಲವು ಗುಣಗಳನ್ನು ತಮ್ಮಲ್ಲಿ ಬೆಳೆಸಿಕೊಳ್ಳಬೇಕಾದುದು ಅಗತ್ಯ. ಅವು ಯಾವುದೆಂದರೆ :

1) ಸತ್ಯವಾದಿತನ : ತನ್ನ ನಡೆಯಲ್ಲಿ ಸತ್ಯ, ನುಡಿಯಲ್ಲಿ ಸತ್ಯವನ್ನು ಪಾಲಿಸಿದಾತ ನನ್ನು ಇವರು ಬಹಳ ಬೇಗನೆ ಆಕರ್ಷಿಸುತ್ತಾರೆ. ಆತನ ವಿಚಾರಗಳಿಗೆ ಮನ್ನಣೆ ನೀಡಿ ಆತನ ಹಿಂಬಾಲಕರಾಗುತ್ತಾರೆ.

2) ಪ್ರಾಮಾಣಿಕತೆ : ಸತ್ಯವಾದಿತನದೊಂದಿಗೆ ಪ್ರಾಮಾಣಿಕತೆಯೂ ಬಹಳ ಮುಖ್ಯ. ಈ ಗುಣವನ್ನು ಚಿಕ್ಕ ಮಕ್ಕಳಿಂದಲೇ ಬೆಳೆಸಿಕೊಂಡು ಬರಬೇಕಾಗುತ್ತದೆ. ಇದಕ್ಕಾಗಿ ಮನೆಯ ಪರಿಸರದಲ್ಲಿಯೇ ಈ ಸಂಸ್ಕಾರ ಬೆಳೆದು ಬರುವಂತೆ ನೋಡಿಕೊಳ್ಳಬೇಕು.

3) ಪರಿಶ್ರಮ : ಇತರರಿಗಾಗಿ ಅಲ್ಲದಿದ್ದರೂ ತನ್ನ ಕರ್ತವ್ಯಕ್ಕಾಗಿ ಶ್ರಮಭರಿತ ಕೆಲಸಗಳನ್ನು ಮಾಡಬೇಕು. ಕೇವಲ ಫಲಾಪೇಕ್ಷೆಯಿಂದ ಮಾಡುವ ಪರಿಶ್ರಮವು ಆತನಿಗೆ ಜೀವನದಲ್ಲಿ ಯಶಸ್ಸನ್ನು ತರುವುದಿಲ್ಲ.

4) ಇತರರನ್ನು ನೋಯಿಸದೇ ಇರುವುದು : ಯಾವುದೇ ಸಂದರ್ಭದಲ್ಲಿಯೂ ಮನಸ್ಸನ್ನು ನೋಯಿಸದೆ ಇರುವುದು, ಎಂದರೆ ತಾನು ಮಾಡುವ ಕಾರ್ಯ, ಆಡುವ ಮಾತು, ಮೊದಲಾದುವುಗಳಿಂದ ಇನ್ನೊಬ್ಬರಿಗೆ ನೋವುಂಟು ಮಾಡದೆ ಇರುವುದು.

5) ಇತರರ ದುಃಖವನ್ನು ಶಮನಗೊಳಿಸುವಿಕೆ : ಇತರರ ದುಃಖದಲ್ಲಿ ತಾವು ಪಾಲ್ಗೊಂಡು ಆ ದುಃಖ ಕಡಿಮೆಗೊಳಿಸುವ ಸಲುವಾಗಿ ತಮ್ಮಿಂದಾದ ಸಹಾಯ ಮಾಡುವ ತ್ಯಾಗ ಮನೋಭಾವವನ್ನು ಬೆಳೆಸಿಕೊಳ್ಳುವುದು.

ಈ ಮೇಲಿನ ಗುಣಗಳನ್ನು ತನ್ನದಾಗಿಸಿಕೊಂಡಾತನನ್ನು ಸಮಾಜದ ಇತರರು ಒಪ್ಪುತ್ತಾರೆ. ಆತನನ್ನು ಹಿಂಬಾಲಿಸಿಕೊಂಡು ಬರುತ್ತಾರೆ. ನಮಗೆಲ್ಲಾ ಆತನೇ ಆದರ್ಶವೆಂದು ತಿಳಿದು ಕೊಳ್ಳುತ್ತಾರೆ. ಆದ್ದರಿಂದ ಇಂತಹ ಗುಣಗಳನ್ನು ಬೆಳೆಸಿಕೊಳ್ಳುವಂತೆ ನಾವೆಲ್ಲರೂ ಪ್ರಯತ್ನಿಸೋಣ.

# ಶ್ರೀ ಕೃಷ್ಣಾಯನ

## (ಶ್ರೀ ಮದ್ಭಾಗವತಾನುಸಾರಿ)



– ಕೆ. ಆತ್ಮಾರಾಮ ಶಾಸ್ತ್ರಿ
ಬೆಂಗಳೂರು


(ಹಿಂದಿನ ಸಂಚಿಕೆಯಿಂದ...)

ಗೊಲ್ಲ ಬಾಲಕರ ಸಂಗಡ ಹಸುಗಳನ್ನು ಮೇಯಿಸುತ್ತಾ ಅವರು ವೃಂದಾವನದಲ್ಲಿ ಸುತ್ತಾಡುತ್ತಿದ್ದರು. ವೃಂದಾವನದ ಚೆಲುವನ್ನು ವರ್ಣಿಸಲಸದಳ. ಮರ, ಗಿಡ, ಲತೆಗಳು, ಫಲಪುಷ್ಪ ಭರಿತವಾಗಿದ್ದವು. ಲತೆಗಳು ವಿವಿಧ ವರ್ಣಗಳ ಪುಷ್ಪಗಳಿಂದ ಬಗೆ ಬಗೆಯ ಬಣ್ಣದ ಬಟ್ಟೆಗಳನ್ನು ಧರಿಸಿದ ಯುವತಿಯರಂತೆ ಕಾಣುತ್ತಿದ್ದವು. ಭೃಂಗಗಳು ವಿಟರಂತೆ ಹಾಡುತ್ತ ಲತೆಗಳ ಸುತ್ತಲೂ ಹಾರಾಡುತ್ತಿದ್ದವು. ಅಲ್ಲಿ-ಇಲ್ಲಿ ಚೆಂದಚೆಂದದ ಜಿಂಕೆಗಳು ಮೇಯುತ್ತಾ, ನೆಗೆದಾಡುತ್ತಾ ಓಡಾಡುತ್ತಿದ್ದವು. ಪಕ್ಕದಲ್ಲೇ ಯಮುನಾನದಿಯು ಜುಳುಜುಳು ಸದ್ದು ಮಾಡುತ್ತಾ ಹರಿಯುತ್ತಿತ್ತು. ವ್ರಜವಾಸಿಗಳಿಗೆ ಅಭಯವನ್ನು ನೀಡುತ್ತಿದೆಯೋ ಎಂಬಂತೆ ಗೋವರ್ಧನ ಪರ್ವತವೂ ಅಲ್ಲಿ ಶೋಭಿಸುತ್ತಿತ್ತು. ಈ ಸೊಬಗಿನ ಪರಿಸರದಲ್ಲಿ ರಾಮ, ಕೃಷ್ಣರು ಗೊಲ್ಲ ಹುಡುಗರೊಡನೆ ಆಟವಾಡುತ್ತಾ ಆನಂದದಿಂದ ಕಾಲಕಳೆಯುತ್ತಿದ್ದರು. ರಾಮನು ಬಳಲಿದಾಗ ಕೃಷ್ಣನು ಅವನ ತಲೆಯನ್ನು ತನ್ನ ತೊಡೆಯ ಮೇಲಿಟ್ಟುಕೊಂಡು ಮಲಗಲು ಹೇಳುತ್ತಿದ್ದನು. ಬಲರಾಮನು ನಿದ್ರೆಗೆ ಜಾರಿದಾಗ ಅಗಲವಾದ ಎಲೆಯಿಂದ ಅವನಿಗೆ ಗಾಳಿ ಬೀಸುತ್ತಿದ್ದನು. ಒಮ್ಮೊಮ್ಮೆ ಅವನ ಕಾಲುಗಳನ್ನೊತ್ತುತ್ತಿದ್ದನು. ಹೀಗೆ, ಅಣ್ಣನ ಸೇವೆಯಲ್ಲಿ ಕೃಷ್ಣನು ಆನಂದಪಡುತ್ತಿದ್ದನು. ಕೃಷ್ಣನು ಬಳಲಿ ಮಲಗಿದಾಗ ಗೊಲ್ಲಬಾಲಕರು ಅವನ ಕಾಲುಗಳನ್ನೊತ್ತಿ ಸಂತೋಷ ಅನುಭವಿಸುತ್ತಿದ್ದರು.

ರಾಮ, ಕೃಷ್ಣರ ಆಪ್ತ ಮಿತ್ರರಲ್ಲಿ ಶ್ರೀದಾಮನೆಂಬವನು ಮುಖ್ಯನು. ಒಂದು ದಿನ ಶ್ರೀದಾಮ, ಸುಬಲ, ಸ್ತೋಕಕೃಷ್ಣ ಮೊದಲಾದ ಗೆಳೆಯರು ಪ್ರೇಮದಿಂದ ರಾಮ, ಕೃಷ್ಣರಿಗೆ ಹೇಳಿದರು, ''ರಾಮಣ್ಣ, ಕೃಷ್ಣಯ್ಯ, ಇಲ್ಲಿಗೆ ಸ್ವಲ್ಪ ದೂರದಲ್ಲಿ ತಾಳೆಮರಗಳ ಒಂದು ವನವಿದೆ. ಆ ಮರಗಳಿಂದ ತುಂಬಾ ಹಣ್ಣುಗಳು ಕೆಳಗುದುರುತ್ತವೆ. ಬಿದ್ದೂ ಇವೆ. ಆದರೆ ದುರಾತ್ಮನಾದ ಧೇನುಕನೆಂಬ ರಕ್ಕಸನು ಅವುಗಳನ್ನು ಮುಟ್ಟಲೂ ಬಿಡುವುದಿಲ್ಲ, ಅವನಿರುವುದು ಕತ್ತೆಯ ರೂಪದಲ್ಲಿ. ಅವನ ಸಂಗಡ ಇನ್ನೂ ಅನೇಕ ಅಸುರರು ಕತ್ತೆಯ ರೂಪದಲ್ಲೇ ಅಲ್ಲಿದ್ದಾರೆ. ಅಲ್ಲಿಗೆ ಹೋದ ಜನರನ್ನು ಅವರು ತಿಂದೇ ಬಿಡುತ್ತಾರೆ. ಜನರೇನು? ಪಶು, ಪಕ್ಷಿಗಳೂ ಆ ವನದ ಕಡೆ ಸುಳಿಯುವಂತಿಲ್ಲ, ತಾಳೆಯ ಹಣ್ಣುಗಳ ರುಚಿ ಹೇಗಿದೆಯೋ ತಿಳಿಯದು. ಆದರೆ ಅವುಗಳು ಪರಿಮಳ ಭರಿತವಾಗಿರಬೇಕು. ಇಲ್ಲಿಗೂ ಅವುಗಳ ಸುವಾಸನೆ ಬರುತ್ತಿದೆ. ಆ ಸುಗಂಧಕ್ಕೆ ಬಾಯಿ ನೀರೂರುತ್ತದೆ. ಅವುಗಳನ್ನು ತಿನ್ನುವ ಆಸೆಯಾಗಿದೆ. ನೀವಿಬ್ಬರೂ ಅತುಲ ಬಲಶಾಲಿಗಳು. ಏನಾದರೂ ಮಾಡಿ ನಮಗೆ ಆ ಹಣ್ಣುಗಳನ್ನು ತಿನ್ನಿಸಬಾರದೇ?''

ಈ ಮಾತುಗಳನ್ನು ಕೇಳಿದ ಶ್ರೀಕೃಷ್ಣನೂ, ಬಲರಾಮನೂ ಸ್ನೇಹಿತರನ್ನು ಸಂತೋಷಗೊಳಿಸಬೇಕೆಂದು ನಿಶ್ಚಯಿಸಿ ನಗುತ್ತಾ ತಾಳವನಕ್ಕೆ ಅವರನ್ನು ಕರೆದುಕೊಂಡು ಹೋದರು. ಅಲ್ಲಿ ಬಲಭದ್ರನು ಆನೆಮರಿಯಂತೆ ತಾಳೆಮರಗಳನ್ನು ಜೋರಾಗಿ ಅಲ್ಲಾಡಿಸಿದನು. ಅವುಗಳಿಂದ ದೊಡ್ಡದೊಡ್ಡ ಹಣ್ಣುಗಳು ತೊಪತೊಪನೆ ಬಿದ್ದವು. ಎಲ್ಲೋ ಇದ್ದ ಧೇನುಕಾಸುರನಿಗೆ ಹಣ್ಣುಗಳು ಬೀಳುವ ಶಬ್ದ ಕೇಳಿಸಿತು. ಕೂಡಲೇ ನೆಲ ಬೆಟ್ಟಗಳು ನಡುಗುವಂತೆ ಗರ್ಜಿಸುತ್ತಾ ಅಲ್ಲಿಗೆ ಧಾವಿಸಿ ಬಂದನು. ಮರವನ್ನು ಅಲ್ಲಾಡಿಸುತ್ತಿದ್ದ ಬಲರಾಮನ ಹತ್ತಿರ ಹೋಗಿ ಅವನಿಗೆ ಪೃಷ್ಠಹಾಕಿ ನಿಂತು ಹಿಮ್ಮುಖವಾಗಿ ಜೋರಾಗಿ ಬಂದು ರಾಮನ ಎದೆಗೆ ಒದ್ದನು. ಪುನಃ ಹಾಗೇ ಒದೆಯಲು ಬಂದಾಗ ಬಲರಾಮನು ಅವನ ಎರಡು ಕಾಲುಗಳನ್ನು ಒಂದೇ ಕೈಯಿಂದ ಹಿಡಿದುಕೊಂಡು ಅವನನ್ನು ಎತ್ತಿ ಗರಗರನೆ ತಿರುಗಿಸಿ ತಾಳೆಯ ಮರದ ತುದಿಗೆಸೆದನು. ಹಾಗೆ ತಿರುಗಿಸುವ ರಭಸಕ್ಕೆ ಅಸುರನು ಪ್ರಾಣ ಬಿಟ್ಟಿದ್ದನು. ತಾಳೆಮರದ ಮೇಲೆ ಬಿದ್ದಾಗ ಮರ ಮುರಿದೇ ಹೋಯಿತು. ಅದರೊಡನೆ ಇನ್ನೂ ಅನೇಕ ಮರಗಳು ಧರೆ ಗುರುಳಿದವು. ತಮ್ಮ ಬಂಧುವಿನ ಸಾವಿನಿಂದ ಕ್ರುದ್ಧರಾದ ಇತರ ರಕ್ಕಸರು ಭಯಂಕರವಾಗಿ ಕಿರಿಚುತ್ತಾ ಓಡಿ ಬಂದು ರಾಮ, ಕೃಷ್ಣರ ಮೇಲೆ ದಾಳಿ ಮಾಡಿದರು. ರಾಮ, ಕೃಷ್ಣರು ಲೀಲಾಜಾಲವಾಗಿ ಅವರನ್ನೆಲ್ಲ ಧೇನುಕಾಸುರನಿಗೆ ಮಾಡಿದಂತೆ ಅವನ ಹಿಂದೆ ಪರಲೋಕಕ್ಕೆ ಕಳುಹಿಸಿದರು. ದೇವತೆಗಳು ಜಯಕಾರ ಮಾಡುತ್ತ ಅವರ ಮೇಲೆ ಪುಷ್ಪವೃಷ್ಟಿ ಮಾಡಿದರು. ಹೀಗೆ ರಾಕ್ಷಸರ ಸಂಹಾರವಾದ ಮೇಲೆ ಆ ವನದಲ್ಲಿ ಪಶು, ಪಕ್ಷಿಗಳೂ, ಮನುಷ್ಯರೂ ನಿರ್ಭಯವಾಗಿ ಸಂಚರಿಸಿದರು.

ಇನ್ನೊಮ್ಮೆ ಕೃಷ್ಣನೂ, ಗೊಲ್ಲಬಾಲಕರೂ ಯಮುನಾ ನದಿಯ ತೀರಕ್ಕೆ ಹೋದರು. ಆ ದಿನ ಬಲರಾಮ ಅವರೊಡನಿರಲಿಲ್ಲ, ಬಾಯಾರಿದ ಅವರೆಲ್ಲ ಯಮುನೆಯ ನೀರನ್ನು ಯಥೇಚ್ಛವಾಗಿ ಕುಡಿದರು. ನೀರು ಕುಡಿದ ದನಗಳು, ಗೋಪಪುತ್ರರು ಯಮುನೆಯ ದಡದಲ್ಲಿ ಸತ್ತು ಬಿದ್ದರು. ಆದರೆ ಭಗವಂತನಾದ ಶ್ರೀಕೃಷ್ಣನು ಅವರನ್ನೆಲ್ಲ ವೀಕ್ಷಣ ಮಾತ್ರದಿಂದ ಬದುಕಿಸಿದನು. ಆ ನೀರು ಕಾಳಿಯನೆಂಬ ಮಹಾಸರ್ಪನ ವಿಷದಿಂದ ವಿಷಮಯವಾಗಿತ್ತು. ನಂದಾತ್ಮಜನಿಗೆ ಈ ವಿಷಯ ತಿಳಿಯಿತು. ಕಾಳಿಯನಿಗೆ ಪಾಠಕಲಿಸಬೇಕೆಂದು ನಿಶ್ಚಯಿಸಿ ಯಮುನೆಯ ತಡಿಯಲ್ಲಿದ್ದ ಒಂದು ಕದಂಬ ವೃಕ್ಷವನ್ನೇರಿ ಅಲ್ಲಿಂದ ಯಮುನೆಯ ಮಡುವಿಗೆ ಧುಮುಕಿದನು.



ಕಾಳಿಯನ ವಿಷ ಎಷ್ಟು ಘೋರವಾಗಿತ್ತೆಂದರೆ ಯಮುನೆಯ ನೀರು ಕೊತಕೊತನೆ ಕುದಿಯುತ್ತಿತ್ತು.

(ಮುಂದುವರಿಯುವುದು)

## ಹೊಸ ಬೆಳಕು

**ನಲ್ನುಡಿ :**
**ಅಪ್ಪುದಪ್ಪುದು. ಆದೊಡಂ**
**ಸಕ್ಕದಮೊಂದೆ, ರನ್ನವಣಿಯಂ ಪೊನ್ನಿಂ**
**ಬಿಗಿದಂತೆಸೆಗುಂ; ಅದಱಿಂ**
**ಕರ್ಮಣಿಸರದೊಳ್ ಚೆಂಬವಳಮಂ**
**ಕೋದಂತಿರೆ, ರಸಮೊಸರೆ, ಲಕ್ಖಣಂ**
**ಮಿಕ್ಕಿರೆ, ಎಡೆಯೊಡೆಯೊಳ್ ಸಕ್ಕದದ**
**ನಲ್ನುಡಿ ಮೆಱೆಯೆ, ತಿರುಳ್ಗನ್ನಡದೊಳೆ**
**ಕತೆಯನುಸಿರ್ವೆಂ.**

ಅಂದರೆ ಹೌದು, ಹೌದು. ಆದರೂ ಸಂಸ್ಕೃತ ಸೇರಿದರೆ ರತ್ನದ ಮಣಿಯನ್ನು ಹೊನ್ನಿನಿಂದ ಬಿಗಿದಂತೆ ಎಸೆಯುತ್ತದೆ; ಆದ್ದರಿಂದ ಕರಿಮಣಿಸರದಲ್ಲಿ ಕೆಂಪುಹವಳವನ್ನು ಸುರಿದಂತೆ, ಸರವೊಸರುತ್ತಿರಲು, ಲಕ್ಷಣವು ಮಿಕ್ಕಿರಲು, ಎಡೆಯೆಡೆಯಲ್ಲಿ ಸಂಸ್ಕೃತದ ಒಳ್ಳೆಯ ನುಡಿ ಮೆರೆಯಲು, ತಿರುಳ್ಗನ್ನಡದಲ್ಲೇ ಕತೆಯನ್ನು ಹೇಳುತ್ತೇನೆ.

## ಪುಸ್ತಕ ಪರಿಚಯ :

**ಮುದ್ದಣಕವಿ ರಚಿತಂ 'ಶ್ರೀರಾಮಾಶ್ವಮೇಧಂ'**
*ಟಿಪ್ಪಣಿ ಸಾರ ಲೇಖಕರು :*
**ತೆಕ್ಕುಂಜ ಗೋಪಾಲಕೃಷ್ಣ ಭಟ್**
*ಸಂಪಾದಕ :* **ಡಾ। ಪಾದೇಕಲ್ಲು ವಿಷ್ಣು ಭಟ್ಟ**
*ಪ್ರಕಾಶನ :* **ಮುದ್ದಣ ಪ್ರಕಾಶನ**
**ಮುದ್ದಣ ಚಾವಡಿ, ಚರ್ಚ್ ರಸ್ತೆ, ಬಿಜೈ, ಮಂಗಳೂರು.**

ನಂದಳಿಕೆ ಬಾಲಚಂದ್ರರಾವ್ ಪ್ರಕಾಶಕರ ಮಾತಿನಲ್ಲಿ ಹೇಳಿದಂತೆ-'ಮುದ್ದಣ' ಕನ್ನಡ ಸಾಹಿತ್ಯ ಲೋಕದಲ್ಲೊಂದು ವಿಸ್ಮಯ. ಹಳ್ಳಿಯ ಮೂಲೆಯಲ್ಲಿ ಹುಟ್ಟಿ ಸ್ವಪ್ರಯತ್ನದಿಂದ ಸಾಹಿತ್ಯ ಅಧ್ಯಯನ ಮಾಡಿ ಸಾವಿರಾರು ಜನ ಸಾಹಿತ್ಯಪ್ರಿಯರು ಗಂಭೀರವಾಗಿ ಅಧ್ಯಯನ ಮಾಡುವಂತಹ ಗ್ರಂಥಗಳನ್ನು ಕನ್ನಡದ ಜನತೆಗೆ ನೀಡಿದ ಮಹಾಪುರುಷ. ಅವನು ಮಹಾಪುರುಷನೆಂಬುದಕ್ಕೆ ಈಗಲೂ ಅವನ ಕುರಿತಾಗಿ ಅಧ್ಯಯನ ಮುಂದುವರಿಯುತ್ತಿರುವುದು ಮತ್ತು ಅನೇಕರಿಗೆ ಅವನ ಕೃತಿಗಳು ಸಾಹಿತ್ಯಾಧ್ಯಯನದ ಪ್ರೇರಣೆಯನ್ನು ನೀಡುತ್ತಿರುವುದು ಸಾಕ್ಷಿಯಾಗಿದೆ.... 'ನಂದಳಿಕೆಯ ನಂದನ'ದಂತಹ ಪುಸ್ತಕವನ್ನು ಸಂಪಾದಿಸಿ ಪ್ರಕಟಿಸುವ ಸುಸಂದರ್ಭ ದೊರೆತಿದೆ. ಎಲ್ಲಕ್ಕಿಂತ ಮಿಗಿಲಾಗಿ ಮುದ್ದಣನ ನಂದಳಿಕೆಯವನು ನಾನೆಂಬ ಗೌರವ ನನಗೆ ಕನ್ನಡ ನಾಡಿನಲ್ಲೆಲ್ಲ ದೊರಕಿದೆ. ಮುದ್ದಣನ ನೆನಪನ್ನು ಆಗಾಗ ನಾಡಿನ ವಿವಿಧ ಕಡೆಗಳಲ್ಲಿ ಮಾಡುವುದನ್ನು ಕರ್ತವ್ಯ ಮತ್ತು ವ್ರತದಂತೆ ನಾನು ಜನಸಹಕಾರದಿಂದ ನಡೆಸಿಕೊಂಡು ಬಂದಿದ್ದೇನೆ. ಆ ಸಾಲಿಗೆ ಈ ಪುಸ್ತಕದ ಪ್ರಕಾಶನವೂ ಇನ್ನೊಂದು ಸೇವೆಯಾಗಿ ಸೇರುತ್ತಿದೆ....

ಪ್ರೊ. ತೆಕ್ಕುಂಜ ಗೋಪಾಲಕೃಷ್ಣ ಭಟ್ಟರು ಕನ್ನಡದ ಹಿರಿಯ ವಿದ್ವಾಂಸರು. ಶ್ರೀರಾಮಾಶ್ವಮೇಧವನ್ನು ಟಿಪ್ಪಣಿಸಾರಸಮೇತವಾಗಿ ಅವರು ಪ್ರಕಟಿಸಿದುದು ಒಂದು ಸಾಹಸಕಾರ್ಯವೇ ಸರಿ. ಆ ಗ್ರಂಥವನ್ನು ಪೂರಕ ವಿಷಯಗಳ ಸೇರ್ಪಡೆಯೊಡನೆ ಪರಿಷ್ಕರಿಸಿ ಸಂಪಾದಿಸುವ ಹೊಣೆಯನ್ನು ವಹಿಸಲು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸಂಶೋಧಕರೂ ವಿದ್ವಾಂಸರೂ ಆದ, ಪ್ರಸ್ತುತ ಹಿರಿಯಡಕ ಸರಕಾರಿ ಪ್ರಥಮದರ್ಜೆ ಕಾಲೇಜಿನ ಸ್ಥಾಪಕ ಪ್ರಾಂಶುಪಾಲರಾಗಿರುವ ಡಾ.ಪಾದೇಕಲ್ಲು ವಿಷ್ಣು ಭಟ್ಟರಲ್ಲಿ ಕೇಳಿಕೊಂಡಾಗ ಅವರು ತಮ್ಮ ಅನೇಕ ಸಾಹಿತ್ಯಕಾರ್ಯಗಳ ನಡುವೆ ಇದನ್ನು ನಿರ್ವಹಿಸಲು ಸಂತೋಷದಿಂದಲೇ ಒಪ್ಪಿಕೊಂಡರು.

ಶ್ರೀಧರ್ಮಸ್ಥಳ ಧರ್ಮಾಧಿಕಾರಿಗಳಾದ ಡಿ.ವೀರೇಂದ್ರ ಹೆಗ್ಗಡೆಯವರು ಸಂದೇಶದಲ್ಲಿ ತಿಳಿಸಿದಂತೆ-'ಶ್ರೀರಾಮಾಶ್ವಮೇಧ' ಎಂದರೆ ಅದೊಂದು ನಂದನವನ, ಸೊಗಸಿನ ಮನೆ, ನವರಸದ ನಿಧಿ, ಮಹಾಕಾವ್ಯವಾಗಲು ಬೇಕಾದ ಎಲ್ಲಾ ಗುಣಗಳು ಅದರಲ್ಲಡಗಿವೆ. ಲಾಲಿತ್ಯ, ಮಾಧುರ್ಯ, ಅಲಂಕಾರ ಇವುಗಳ ಸುಗ್ಗಿ ಇಲ್ಲಿದೆ. ಈ ಗ್ರಂಥವು ಪ್ರಕೃತಿಯ ಸರಸವರ್ಣನೆಯಿಂದ, ಮುದ್ದಣ ಮನೋರಮೆಯರ ಸರಸಸಲ್ಲಾಪದಿಂದ ಆರಂಭವಾಗುತ್ತದೆ. ಕೃತಿಯ ಆರಂಭದಲ್ಲಿರುವ ಮಳೆಗಾಲದ ವರ್ಣನೆಯಂತೂ ಹೃದ್ಯವಾಗಿದೆ. ''ಓವೋ ಕಾಲಪುರುಷಂಗೆ ಗುಣಂ ಅಣಂ ಇಲ್ಲಂ ಗಡ'' ಎಂಬುದು ಸುಂದರವಾದ ಕಲ್ಪನೆ.

– ವೈ. ಮೋಹನ ರಾವ್.


**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಆಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ

## ವಿದೇಶ ಪ್ರವಾಸ



ಅಂಬಲಪಾಡಿ ಉಡುಪಿಯಲ್ಲಿರುವ ಶ್ರೀ ಎಚ್. ನಿತ್ಯಾನಂದ ಶ್ಯಾನುಭಾಗ ಮತ್ತು ಶ್ರೀಮತಿ ಮಹಾಲಕ್ಷ್ಮೀ ಶ್ಯಾನುಭಾಗ್ ಇವರು ನವಂಬರ್ 2 ರಂದು ಬೆಂಗಳೂರಿನಿಂದ ಥ್ಯಾಲ್ಯಾಂಡ್, ಮಲೇಶಿಯಾ ಹಾಗೂ ಸಿಂಗಾಪುರ ದೇಶಗಳ ಪ್ರವಾಸಕ್ಕೆ ತೆರಳಿದ್ದಾರೆ. ಇವರು ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಸಕ್ರಿಯ ಸದಸ್ಯರಾಗಿದ್ದಾರೆ. ಇವರ ಪ್ರವಾಸವು ಸುಗಮವಾಗಲೆಂದು ಶ್ರೀಶಾರದಾ ಬಳಗದ ಶುಭ ಹಾರೈಕೆ.




ದಿನಾಂಕ 02-10-2009 ಶುಕ್ರವಾರದಂದು ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಇಲ್ಲಿ ನವರಾತ್ರಿಯ ಪ್ರಯುಕ್ತ ಜರಗಿದ ನಾಡ ಹಬ್ಬದಂದು ಎಸ್.ಎಸ್.ಎಲ್.ಸಿ., ಪಿ.ಯು.ಸಿ.ಯಲ್ಲಿ ವಿಶಿಷ್ಠ ಶ್ರೇಣಿಯಲ್ಲಿ ತೇರ್ಗಡೆಯಾದ ನಮ್ಮ ಸಮಾಜದ 29 ವಿದ್ಯಾರ್ಥಿ/ವಿದ್ಯಾರ್ಥಿನಿಯರನ್ನು ದಿವಂಗತ ಕೆ. ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನದ ವತಿಯಿಂದ ಅಭಿನಂದಿಸಲಾಯಿತು.

## ಮಂಗಳೂರಿನಲ್ಲಿ ನವಂಬರ್ 22ರಂದು ಇನ್ನ ರಾಮಮೋಹನ ರಾವ್ ಕುರಿತು ಕೃತಿ ಬಿಡುಗಡೆ

ಭಾರತದ ನಾಲ್ವರು ಪ್ರಧಾನ ಮಂತ್ರಿಗಳ ಸಲಹೆಗಾರರಾಗಿದ್ದ, ಮಾಜಿ ಪ್ರಧಾನ ವಾರ್ತಾಧಿಕಾರಿ ಶ್ರೀ ಐ. ರಾಮಮೋಹನ ರಾವ್ ಅವರ ಬದುಕು ಮತ್ತು ಸಾಧನೆಗಳ ಕುರಿತ ಕೃತಿ ನವೆಂಬರ್ 22ರಂದು ಮಂಗಳೂರಿನಲ್ಲಿ ಬಿಡುಗಡೆಗೊಳ್ಳಲಿದೆ. ದೆಹಲಿ ಮಿತ್ರ ಪ್ರಕಾಶನ ಈ ಕೃತಿಯನ್ನು ಹೊರ ತರುತ್ತಿದೆ. ಡೆಕ್ಕನ್ ಹೆರಾಲ್ಡ್‌ನ ಮಾಜಿ ಪತ್ರಕರ್ತ ಶ್ರೀ ಮಲಾರ್ ಜಯರಾಮ ರೈ ಈ ಕೃತಿಯ ಸಂಪಾದಕರು. ಕೇಂದ್ರ ಸಚಿವರು ಮತ್ತು ಗಣ್ಯರು ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ ಎಂಬುದಾಗಿ ದೆಹಲಿ ಮಿತ್ರ ಬಳಗದ ಶ್ರೀ ವೈ. ಅವನೀಂದ್ರನಾಥ್‌ರಾವ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ''ಕನ್ನಡದ ತುತ್ತೂರಿ'' ಪುಸ್ತಕ ಬಿಡುಗಡೆ

ಸಹ್ಯಾದ್ರಿ ಪ್ರೌಢಶಾಲೆ ಸಭಾಂಗಣ, ರಾಜೇಂದ್ರನಗರ, ಶಿವಮೊಗ್ಗದಲ್ಲಿ ಶ್ರೀ ಮಹಾಗಣಪತಿ ಪ್ರಕಾಶನ, ಶಿವಮೊಗ್ಗ ಮತ್ತು ಸಹ್ಯಾದ್ರಿ ಪ್ರೌಢಶಾಲೆ ರಾಜೇಂದ್ರ ನಗರ ಶಿವಮೊಗ್ಗ ಇವರ ಸಂಯುಕ್ತ ಆಶ್ರಯದಲ್ಲಿ ಮಕ್ಕಳ ದಿನಾಚರಣೆಯ ಪ್ರಯುಕ್ತ ಶ್ರೀ ಮೂರ್ಪಳ್ಳಿ ಆರ್.ಮಂಜುನಾಥ್, ಎಂ.ಎ., ಶಿವಮೊಗ್ಗ ಇವರು ಬರೆದ 17ನೇ ಕೃತಿ ಕನ್ನಡ ತುತ್ತೂರಿ (ಮಕ್ಕಳ ಕವನ ಸಂಕಲನ) ಪುಸ್ತಕ ಬಿಡುಗಡೆ ಸಮಾರಂಭವು ದಿನಾಂಕ 14-11-2009ರಂದು ನಡೆಯಲಿರುವುದು ಎಂದು ಪ್ರಕಟಣೆಯಲ್ಲಿ ತಿಳಿಸಿರುವರು.

## ಮೈಸೂರು : ಶ್ರೀಜ್ಞಾನಶಕ್ತಿ ಸಾಂಸ್ಕೃತಿಕ ಸಭಾ ಮಹಿಳಾ ಘಟಕ ಸಭೆ

ಮೈಸೂರು ಶ್ರೀ ಜ್ಞಾನಶಕ್ತಿ ಸಾಂಸ್ಕೃತಿಕ ಸಭಾದ ಮಹಿಳಾ ವಿಭಾಗದ ಸಭೆಯು ದಿನಾಂಕ 02-10-2009ರಂದು ಮಹಿಳಾ ಸಂಘದ ಕಾರ್ಯದರ್ಶಿಯಾದ ಶ್ರೀಮತಿ ಲತಾ ರಾಮಮೂರ್ತಿಯವರ ಮನೆಯಲ್ಲಿ ಜರಗಿತು. ಸುಮಾರು 50 ಮಂದಿ ಸದಸ್ಯರುಗಳು ಭಾಗವಹಿಸಿದರು. ವಿಶ್ವದೀಪ್ ಹಾಗೂ ಹರ್ಷದೀಪ್ ಇವರಿಬ್ಬರ ಪ್ರಾರ್ಥನೆಯೊಂದಿಗೆ ಹಾಗೂ ಮಹಿಳಾ ಸಂಘದ ಅಧ್ಯಕ್ಷರಾದ ಶ್ರೀಮತಿ ರಮಾವಾಣಿ ಚಂದ್ರಶೇಖರ್ ತಾಳೆಪ್ಪಾಡಿರವರಿಂದ ಸ್ವಾಗತ ಭಾಷಣದೊಂದಿಗೆ ಸಭೆಯು ಪ್ರಾರಂಭವಾಯಿತು. ಆ ದಿನದ ಸಭೆಯಲ್ಲಿ ಮೈಸೂರಿನ ಸುಪ್ರಸಿದ್ಧ ಆಯುರ್ವೇದಿಕ್ ವೈದ್ಯರಾದ ಶ್ರೀಮತಿ ಪೂರ್ಣಿಮಾರವರಿಂದ ''ದೈನಂದಿನ ಜೀವನ ದಲ್ಲಿ ಆಹಾರ ಪದ್ಧತಿಯ ಪ್ರಾಮುಖ್ಯತೆ'' ಇದರ ಬಗ್ಗೆ ಪ್ರತಿಯೊಬ್ಬರಲ್ಲೂ ಅರಿವು ಮೂಡಿಸಲು ಮಾಹಿತಿ ನೀಡುವ ಕಾರ್ಯಕ್ರಮವನ್ನು ಶ್ರೀಮತಿ ಲತಾ ರಾಮಮೂರ್ತಿಯವರು ಏರ್ಪಡಿಸಿದ್ದರು. ಈ ಕಾರ್ಯಕ್ರಮವೂ ಸುಮಾರು 1 ಘಂಟೆಯ ಕಾಲ ನಡೆದು ಎಲ್ಲರಿಗೂ ಉಪಯುಕ್ತವಾಯಿತು. ನಂತರ ಶ್ರೀಮಾನ್ ರಾಮಮೂರ್ತಿ ದಂಪತಿಗಳು 'ಕ್ವಿಝ್' ಕಾರ್ಯಕ್ರಮ ಏರ್ಪಡಿಸಿದ್ದರು. ಅದರಲ್ಲಿ ಜ್ಞಾನಶಕ್ತಿ ಸಾಂಸ್ಕೃತಿಕ ಸಂಘದ ಸ್ಥಾಪನೆಯ ಕುರಿತು ಹಾಗೂ ಅದರ ಕಾರಣ ಕರ್ತರು ಮತ್ತು ಅದನ್ನು ಮುಂದುವರೆಸಿ ಕೊಂಡು ಬಂದ ರೀತಿ, ಹಾಗೆಯೇ ಶೃಂಗೇರಿ ಮಠದ ಸ್ಥಾಪನೆ, ಧಾರ್ಮಿಕ ರೀತಿ ನೀತಿಗಳ ಬಗ್ಗೆ ಸೊಗಸಾಗಿ ಪ್ರಶ್ನೆಗಳ ಮಾಲಾವಳಿಯನ್ನೇ ಸೃಷ್ಟಿಸಿ, ಅದಕ್ಕೆ ಉತ್ತರವನ್ನು ನೀಡಿದ ಮಹಿಳೆಯರಿಗೆ ಬಹುಮಾನ ನೀಡಿದರು. ಹೆಚ್ಚಿನ ಸದಸ್ಯರು ಬಂದು ಸಹಕರಿಸಿದ್ದರಿಂದ ಮಹಿಳಾ ವಿಭಾಗದ ಕಾರ್ಯಕ್ರಮವು ಯಶಸ್ವಿಯಾಗಿ ನಡೆಯಿತು. ಧನ್ಯವಾದದೊಂದಿಗೆ ಅಂದಿನ ಕಾರ್ಯಕ್ರಮ ಮುಕ್ತಾಯಗೊಂಡಿತು.

**ಸಾಮೂಹಿಕ ಗಣಹೋಮ**

ಶ್ರೀಶಾರದಾ ದೇವಸ್ಥಾನದಲ್ಲಿ ಪ್ರತಿ ತಿಂಗಳು ಸಂಕಷ್ಟಹರ ಚತುರ್ಥಿಯಂದು ನಡೆಯುತ್ತಿರುವ

**ಸಾಮೂಹಿಕ ಗಣಹೋಮವು**

ತಾ.05-12-2009ರಂದು ನಡೆಯಲಿದೆ.

**ಗಣಹೋಮ ಸೇವಾ ಶುಲ್ಕ ರೂ.51/-**

ಗಣಹೋಮ ಸೇವೆ ನೀಡಲು ಇಚ್ಛಿಸುವವರು ಶಾರದಾ ಮಂಟಪದ ಮೆನೇಜರ್‌ರವರನ್ನು ಸಂಪರ್ಕಿಸಲು ಕೋರಲಾಗಿದೆ.

**- ಶ್ರೀಶಾರದಾ ದೇವಸ್ಥಾನ ವೇದಿಕೆ**

ಶ್ರೀಶಾರದಾ ದೇವಸ್ಥಾನದಲ್ಲಿ

**ಡಿಸೆಂಬರ್ ತಿಂಗಳಲ್ಲಿ**

**ತಾ.12-12-2009ರ ಶನಿವಾರ**

ಸಂಜೆ ಗಂಟೆ 5-00ರಿಂದ

**ಗಮಕವಾಚನ-ಪ್ರವಚನ**

ಕಾರ್ಯಕ್ರಮವು ನಡೆಯಲಿದೆ.

ವಾಚನ : ಭಾಗವತ, ಗಮಕಿ ನೀಲಾವರ **ಲಕ್ಷ್ಮೀನಾರಾಯಣರಾವ್**

ಪ್ರವಚನ : ಹವ್ಯಾಸಿ ತಾಳಮದ್ದಳೆ ಅರ್ಥಧಾರಿ, ನಾಟಕಕಾರ, ಪ್ರವಚನಕಾರ **ಶ್ರೀ ಬಾರ್ಕೂರು ನಾಗೇಶರಾವ್.**

ಸರ್ವರಿಗೂ ಆದರದ ಸ್ವಾಗತ

**- ಶ್ರೀಶಾರದಾ ದೇವಸ್ಥಾನ ವೇದಿಕೆ**

**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ - ವಾರ್ಷಿಕ ಮಹಾಸಭೆ**

(1ನೇ ಪುಟದಿಂದ)

ಮಂಡಳಿಯ ಸಭೆಯಲ್ಲಿ ಶ್ರೀ ಸಿ.ಎಸ್.ರಾವ್ ಅಧ್ಯಕ್ಷರಾಗಿಯೂ, ಉಪಾಧ್ಯಕ್ಷರುಗಳಾಗಿ ವೈ. ಸರ್ವಜ್ಞ ಮೂರ್ತಿ ಮತ್ತು ಎಸ್.ಎಂ. ರಾವ್ ತಂತ್ರಾಡಿ, ಕಾರ್ಯದರ್ಶಿಯಾಗಿ ಬಿ. ಕೃಷ್ಣಮೂರ್ತಿ ರಾವ್ ಅಂಬಲಪಾಡಿ, ಕೋಶಾಧಿಕಾರಿಯಾಗಿ ಡಾ। ವೈ. ಸುದರ್ಶನ 'ರಾವ್ ಕುಕ್ಕಿಕಟ್ಟೆ, ಜತೆ ಕಾರ್ಯದರ್ಶಿಗಳಾಗಿ ಯು.ಅರವಿಂದ ಕುಮಾರ್ ಮಣಿಪಾಲ ಹಾಗೂ ಕೆ. ಮಂಜು ನಾಥ ಹೆಬ್ಬಾರ್ ಉಡುಪಿ ಅವಿರೋಧವಾಗಿ ಆಯ್ಕೆಯಾದರು.

ಕಾರ್ಯದರ್ಶಿ ಕೆ. ವೇಣುಗೋಪಾಲ ರಾವ್ ನೂತನವಾಗಿ ಆಯ್ಕೆಯಾದ ಪದಾಧಿ ಕಾರಿಗಳನ್ನು ಅಭಿನಂದಿಸಿ ಶುಭ ಹಾರೈಸಿದರು. ತಮ್ಮ ಹಾಗೂ ಎಂ. ಸದಾನಂದ ರಾಯರ ಕಾರ್ಯಾವಧಿಯಲ್ಲಿ ಸಹಕಾರ ನೀಡಿದ ಎಲ್ಲಾ ಸದಸ್ಯರಿಗೆ ಕೃತಜ್ಞತೆ ಸಲ್ಲಿಸಿದರು. ಕೊನೆಯಲ್ಲಿ ನೂತನವಾಗಿ ಆಯ್ಕೆಯಾದ ಕಾರ್ಯದರ್ಶಿ ಶ್ರೀ ಬಿ. ಕೃಷ್ಣಮೂರ್ತಿ ರಾವ್ ಕೃತಜ್ಞತೆ ಸಲ್ಲಿಸಿದರು.

ಉಡುಪಿ ವಿಶಿಷ್ಟ ರುಚಿಯುಳ್ಳ
Rao's 'ಮಾತೃಛಾಯಾ'ರವರ
ಸಾರಿನ ಹಾಗೂ ಸಾಂಬಾರ್ ಮಸಾಲೆ, ಅಪ್ಪೆಮಿಡಿ ಹಾಗೂ ಮಿಡಿ ಉಪ್ಪಿನಕಾಯಿ ಹಪ್ಪಳ ಹಾಗೂ ಸೆಂಡಿಗೆಗಳು, ಶುದ ದನದ ತುಪ್ಪ ಹಾಗೂ ಜೇನು ತುಪ್ಪ
-: ಮೊದಲಾದ ನಿತ್ಯೋಪಯೋಗಿ ವಸ್ತುಗಳಿಗೆ ಸಂದರ್ಶಿಸಿರಿ :-
ಭಾರತ್ ಸ್ಟೋರ್ಸ್
ರಥಬೀದಿ, ಉಡುಪಿ - 576 101. ಫೋನ್ : 2522444

PRAMOD
AUTOMOBILES
KARANGALPADY, MANGALORE - 575 003.
Ph : 2491723 (O)
2493633 (H.O.)
2212723 (R)
: Wholesale & Retail Dealers in :
2 & 3 WHEELERS SPARES & ACCESSORIES
Prop. : Ln.K. HARSHA KUMAR

''ಜಾಂಬವತಿ ಕಲ್ಯಾಣ'' ಯಕ್ಷಗಾನ ಕಾರ್ಯಕ್ರಮದ ಸರಣಿ ಚಿತ್ರಗಳು

ಕೃಪೆ : ಟಿ. ವಿಶ್ವನಾಥ ಶ್ಯಾನುಭಾಗ್, ರಾಘವೇಂದ ಹೆಬ್ಬಾರ್

# ಓಂ ಈಶಾವಾಸ್ಯಮ್ ವೇದಾಧ್ಯಯನ ಸಂಚಾರಿ ಗುರುಕುಲ, ಬೆಂಗಳೂರು

ಕರ್ನಾಟಕದ ರಾಜಧಾನಿ ಉದ್ಯಾನನಗರಿ ಬೆಂಗಳೂರು ನಗರದ ಕೊಡಿಗೆಹಳ್ಳಿ ಜ್ಞಾನಶಕ್ತಿ ನಗರದಲ್ಲಿರುವ ನಮ್ಮ ಸಮಾಜದ ಆರಾಧ್ಯದೈವ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ವಿಶೇಷ ಪರ್ವ ದಿನಗಳಲ್ಲಿ ನಡೆಯುವ ಗಂಭೀರವೂ, ಸುಶ್ರಾವ್ಯವೂ ಆದ ಸಾಮೂಹಿಕ ವೇದ ಪಠಣದಿಂದ ಪ್ರಭಾವಿತರಾಗಿ ಈ ಮಹಾನಗರದ ಅನೇಕ ವಿದ್ಯುನ್ಮಾನ ಸಂಸ್ಥೆಗಳಲ್ಲಿ ಉದ್ಯೋಗಿಗಳಾಗಿರುವ ನಮ್ಮ ಸಮಾಜದ ಕೆಲವು ಯುವಕರು 'ವೇದ' ಪಠಣವನ್ನು ಅಭ್ಯಾಸ ಮಾಡಲು ವ್ಯಕ್ತಪಡಿಸಿದ ಆಸಕ್ತಿಯ ಹಿನ್ನೆಲೆಯಲ್ಲಿ ಇದಕ್ಕೊಂದು ಸೂಕ್ತ ವ್ಯವಸ್ಥೆ, ಅವಕಾಶವನ್ನು ಕಲ್ಪಿಸುವ ಸದುದ್ದೇಶಪೂರಿತ ಪ್ರಯತ್ನದ ಫಲಶ್ರುತಿಯೇ 'ಈಶಾವಾಸ್ಯಮ್ ಗುರುಕುಲ'ದ ಸ್ಥಾಪನೆ. ಇದು ವೇದಾಧ್ಯಯನ ಸಹಕಾರಿ ವಿದ್ಯಾ ಸಂಸ್ಥೆ.

ಇದರ ಪ್ರಾರಂಭೋತ್ಸವವು ವಿರೋಧಿ ನಾಮ ಸಂವತ್ಸರದ ಶರನ್ನವರಾತ್ರಿಯ ಪ್ರಥಮ ಶುಭದಿನದಂದು (01-09-2009) ವೇದಾಭಿಮಾನಿಗಳಾದ ಶ್ರೀಮತಿ ಸಬೀತಾ ಮತ್ತು ಶ್ರೀಯುತ ಶ್ರೀನಿವಾಸ ರಾವ್ ಬೆಂಗಳೂರು ಇವರ ಸ್ವಗೃಹ 'ಮಂಜೂಶಾ'ದಲ್ಲಿ ಸುಮಾರು 15 ವರ್ಷಗಳಿಂದ ತಮ್ಮ ವಕೀಲ ವೃತ್ತಿಯ ನಡುವಿನ ಬಿಡುವಿನ ವೇಳೆಯನ್ನು ವೇದ ಪಠಣ, ಪಾಠಣ, ಅಧ್ಯಯನದಲ್ಲಿ ತೊಡಗಿಸಿಕೊಂಡಿರುವ ಶ್ರೀಯುತ ಗೋಪಾಲಕೃಷ್ಣರಾವ್ (ಜಿ.ಕೆ.ರಾವ್) ಇವರ ಮಾರ್ಗದರ್ಶನದಲ್ಲಿ ಗುರುವಂದನೆ, ವೇದಪುರುಷನ ಪ್ರಾರ್ಥನೆ, ಮಂಗಳಾರತಿಯೊಂದಿಗೆ ಐದು ವಿದ್ಯಾರ್ಥಿ (ಪಂಚಮಂ ಕಾರ್ಯಸಿದ್ಧಿ) (ಓರ್ವ ಸುಮಂಗಲಿ, ನಾಲ್ಕು ಹುಡುಗರು)ಗಳ ಸಮಕ್ಷಮ ನಡೆಯಿತು.

ಇದೊಂದು ವಿನೂತನ ಹಾಗೂ ವಿಶಿಷ್ಟ ಪ್ರಯೋಗ. ಕಾರಣ, ಸಾಮಾನ್ಯವಾಗಿ ಆಸಕ್ತ ವಿದ್ಯಾರ್ಥಿಗಳು ಗುರುವಿನ ಹತ್ತಿರ ಬಂದು ಪಾಠ ಕಲಿಯುವುದು ವಾಡಿಕೆ. ಆದರೆ ಈ ಗುರುಕುಲದಲ್ಲಿ ಆಸಕ್ತ ವಿದ್ಯಾರ್ಥಿಗಳು ತಮ್ಮ ಅನುಕೂಲ ಸಮಯ, ಸ್ಥಳದಲ್ಲಿ ಸೇರಿದಾಗ ಗುರುವೇ ಅಲ್ಲಿಗೆ ಹೋಗಿ ವಿದ್ಯಾದಾನ ಮಾಡುವುದು. 'ಮನೆಮನೆಗೂ ವೇದ ಪ್ರಸಾರ'ವೆಂಬ ನೂತನ ಕ್ರಾಂತಿಕಾರಿ ಅಭಿಯಾನ.

ತಮ್ಮ ಪ್ರಸ್ತಾವಿಕ ಉಪನ್ಯಾಸದಲ್ಲಿ ಶ್ರೀಯುತ ಜಿ.ಕೆ.ರಾಯರು ವೇದದ ಮೂಲ, ಅರ್ಥ, ಸ್ವರೂಪ, ವೇದಪಠಣದ ಕ್ರಮ, ಅದರ ಪ್ರಯೋಜನ ಇತ್ಯಾದಿಗಳನ್ನು ಸವಿಸ್ತಾರವಾಗಿ, ಉದಾಹರಣೆಗಳೊಂದಿಗೆ ವಿದ್ಯಾರ್ಥಿಗಳ ಮನ ಮುಟ್ಟುವಂತೆ ವಿವರಿಸಿದರು. ''ವೇದ ಏನೆಂದು ಕೇಳಿದರೆ ಯಾರಿಂದಲೂ ಸಮರ್ಪಕವೆನಿಸುವ ಉತ್ತರ ಸಿಗದು. ಮುಖ್ಯವಾಗಿ ವೇದ ಒಂದು 'ಕಲ್ಪನೆ'. 'ಅನಂತಾ ವೈ ವೇದಾ' ಎಂದರೆ ವೇದಗಳಿಗೆ ಕೊನೆ ಮೊದಲಿಲ್ಲ. ಅದೊಂದು ಅನಾದಿ, ನಿತ್ಯವಾಗಿರುವ ವಾಙ್ಮಯ, ವೇದವೆಂದರೆ ತಿಳಿದುಕೊಳ್ಳುವುದು, ವಿಚಾರ ಮಾಡುವುದು, ಬಳಸಿಕೊಳ್ಳುವುದು ಎಂಬರ್ಥ. ಧರ್ಮದ ಸ್ವರೂಪವನ್ನು, ಅಗತ್ಯವನ್ನು ತಿಳಿಯಹೇಳಿ ಅದನ್ನು ಬದುಕಿನಲ್ಲಿ ಪಡೆದುಕೊಳ್ಳುವ ಬಗೆಯನ್ನು ತೋರಿಸುವುದು ವೇದ. ಬ್ರಹ್ಮಾಂಡದಲ್ಲಿ ಅಗೋಚರವಾಗಿ ಹರಡಿರುವ ವೇದಪುರುಷನ (ಪರಬ್ರಹ್ಮ) ನಿಶ್ವಾಸ ರೂಪವಾದ ಧ್ವನಿತರಂಗಗಳನ್ನು ಲಕ್ಷೋಪಲಕ್ಷ ವರ್ಷಗಳ ಹಿಂದೆ ಋಷಿಗಳು (ಋಷಿ ಪತ್ನಿಯರು) ತಮ್ಮ ದೀರ್ಘತಪಸ್ಸಿನ ಶಕ್ತಿ, ಸಿದ್ಧಿ, ಪ್ರತಿಭೆಯಿಂದ, ಅಲೌಕಿಕ ಅನುಭವದ ಫಲವಾಗಿ ಕಂಡುಕೊಂಡ ಅನುಭವಕ್ಕೆ ತಂದುಕೊಂಡ ಅನಾದಿ ನಿತ್ಯ, ಸತ್ಯವಾಗಿರುವ ತತ್ವಗಳನ್ನು ಮಂತ್ರಗಳಲ್ಲಿ ಮೂಡಿಸಿದರು. ವೇದ ಅಪೌರುಷೇಯ. ಈ ಮಂತ್ರಗಳಿಗೆ ರಹಸ್ಯಾರ್ಥ ('ನಿನ್ಯಾನಿ')ವಿದೆ. ಇಂತಹ ಶ್ರೇಷ್ಠ ಜ್ಞಾನನಿಧಿಯಾದ ವೇದವಾಙ್ಮಯವು ನಮ್ಮ ಕೈಗೆಟುಕುತ್ತಿದ್ದರೂ ಅದರ ಅಧ್ಯಯನದಿಂದ ನಾವು ವಂಚಿತರಾಗಿದ್ದೇವೆ. ಸಾರ್ಥಕ ಜೀವನದ ಆದರ್ಶಗಳನ್ನು ರೂಪಿಸಲು ಉಪಯುಕ್ತವಾದ ಸಂದೇಶಗಳನ್ನೊಳಗೊಂಡ ವಿಶ್ವದ ಸಮಸ್ತ ವಾಙ್ಮಯರಾಶಿಯಲ್ಲೇ ಪ್ರಾಚೀನತಮವಾದ ಈ ಜ್ಞಾನ ಸಂಪತ್ತಿನಿಂದ ನಮ್ಮ ಇಂದಿನ-ಮುಂದಿನ ಯುವ ಪೀಳಿಗೆಯು ವಂಚಿತವಾಗಬಾರದು. ಈ ಅಪೂರ್ವ ಜ್ಞಾನರಾಶಿಯ ಪಠಣ (ಶ್ರವಣ), ಮನನ ಮತ್ತು ನಿಧಿಧ್ಯಾಸನವೇ ವೇದಾಧ್ಯಯನ. ಇದರಿಂದ ಏಕಾಗ್ರತೆ, ಸೃಜನಾತ್ಮಕ ಶಕ್ತಿಯ ಪ್ರಾದುರ್ಭಾವದಿಂದ ಮನಸ್ಸಿನ ಸಂಸ್ಕಾರಗಳು ಪರಿಶುದ್ಧಗೊಂಡು ತನ್ಮೂಲಕ ಆತ್ಮದರ್ಶನವಾಗುವುದು. ಅದೇ ಪರಬ್ರಹ್ಮ ಸಾಕ್ಷಾತ್ಕಾರ. ಈ ಜ್ಞಾನಯಜ್ಞದ ಸಾಧನೆಯಲ್ಲಿ ಆಸಕ್ತ ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನವನ್ನು ಅವರಿಗೆ ಅನುಕೂಲವಾದ ಸಮಯ, ಸ್ಥಳದಲ್ಲಿ ಒದಗಿಸಿಕೊಡುವ ಪ್ರಯತ್ನವೇ 'ಸಂಚಾರಿ ಗುರುಕುಲ'ದ ಉದ್ದೇಶ. ವೇದವಾಙ್ಮಯ ಪ್ರಸಾರದ ಮಹಾನ್ ಕಾರ್ಯದಲ್ಲಿ ಇದೊಂದು 'ಅಳಿಲ ಸೇವೆ' ಮಾತ್ರ. ಫಲಾಪೇಕ್ಷೆ ಇಲ್ಲದೆ ಮಾಡುವ ಕರ್ಮ. ಈ ಅಭಿಯಾನದ ಪೂರ್ಣ ಉಪಯೋಗವನ್ನು ಅತೀ ಹೆಚ್ಚಿನ ಸಂಖ್ಯೆಯಲ್ಲಿ ನಮ್ಮ ಸಮಾಜದವರು ಪಡೆದು ತಮ್ಮ ಜೀವನವನ್ನು ಬೆಳಗಿಸಿ ಶ್ರೇಯಸ್ಸನ್ನು ಪಡೆಯಬೇಕು'' ಎಂದು ಶ್ರೀರಾಯರು ಕರೆಯಿತ್ತರು.

ತದನಂತರ ಅನೇಕ ವೇದ ಮಂತ್ರಗಳ ಸಂಕಲನ 'ಸಸ್ವರವೇದಮಂತ್ರಾ' (ಶ್ರೀ ರಾಮಕೃಷ್ಣ ಆಶ್ರಮ ಮೈಸೂರು)ವನ್ನು ಪಠ್ಯ ಪುಸ್ತಕವಾಗಿ ಸ್ವೀಕರಿಸಿ, ಅದರಿಂದ ಆಯ್ದ ಬಹು ಪ್ರಚಲಿತ ಸೂಕ್ತಗಳನ್ನೊಳಗೊಂಡ 'ಪಾಠಪಟ್ಟಿ'ಯನ್ನು ಬಿಡುಗಡೆಗೊಳಿಸಲಾಯಿತು.

ಈ ಗುರುಕುಲದ ವೇದಪ್ರಸಾರದ ಪ್ರಯೋಜನವನ್ನು 8 ವರ್ಷದಿಂದ 80 ವರ್ಷದ ವರೆಗಿನ ಬ್ರಾಹ್ಮಣರು (ಶೈವ, ವೈಷ್ಣವ, ಶ್ರೀವೈಷ್ಣವ, ಅದ್ವೈತ, ದ್ವೈತ, ವಿಶಿಷ್ಟಾದ್ವೈತ ಸಮುದಾಯ) ಬಾಲಕರು, ಬಾಲಕಿಯರು, ಮಹಿಳೆಯರು, ನಿವೃತ್ತರು ಉಚಿತವಾಗಿ ಪಡೆಯಬಹುದು. ವೇದಮಂತ್ರಗಳನ್ನು ಪಠಿಸುವ ಕ್ರಮದ ಅಭ್ಯಾಸ ಮಾಡಿಸಲಾಗುವುದು. ಮಂತ್ರಗಳನ್ನು ಕಂಠಪಾಠ ಮಾಡುವ ಅಗತ್ಯವಿಲ್ಲ. ಸಸ್ವರವಾಗಿ, ತಪ್ಪಿಲ್ಲದೆ ಓದುವುದು (ಪಾರಾಯಣ) ವಾರದಲ್ಲಿ ಒಂದು ದಿನ ಶನಿವಾರ ಮಧ್ಯಾಹ್ನ 3-30ರಿಂದ 6 ಗಂಟೆಯ ವರೆಗೆ ಪೂರ್ವನಿರ್ಧರಿತ ಸ್ಥಳದಲ್ಲಿ ವಿದ್ಯಾರ್ಥಿಗಳು ಗುರುಗಳು ಸೇರಿ ಕ್ಲಾಸು ನಡೆಸಲಾಗುತ್ತಿದೆ. ಬೆಂಗಳೂರು ಉತ್ತರ ವಲಯದಲ್ಲಿ ಮೂವರು ಗ್ರಹಸ್ಥರು ತಮ್ಮ ಮನೆಯಲ್ಲಿ ಶನಿವಾರದ ಕ್ಲಾಸು ನಡೆಸಲು ತಮ್ಮ ಒಪ್ಪಿಗೆಯನ್ನಿತ್ತಿರುತ್ತಾರೆ. ಈಗಾಗಲೇ ಐದು ಯುವಕರು, ಮೂವರು ಮಹಿಳೆಯರು ಶನಿವಾರ ನಡೆಯುವ ಜ್ಞಾನ ಸತ್ರದಲ್ಲಿ ಭಾಗಿಯಾಗುತ್ತಿದ್ದಾರೆ. ಹಾಗೆಯೇ ಎರಡು ಗೃಹಸ್ಥರು ಭಾನುವಾರ ಬೆಳಿಗ್ಗೆ 6ರಿಂದ 8 ಗಂಟೆಯವರೆಗೆ ಶ್ರೀ ಜಿ. ಕೆ. ರಾಯರ ಕಮಲಾನಗರದಲ್ಲಿರುವ ಮನೆಯಲ್ಲಿ ಈ ಅಭಿಯಾನದ ಉಪಯೋಗ ಪಡೆಯುತ್ತಿದ್ದಾರೆ.

ವೇದಪಠಣ, ವೇದಾಧ್ಯಯನ ಮಾಡುವುದಕ್ಕೆ ಸಂಸ್ಕೃತ ಭಾಷೆ, ಲಿಪಿ ಇತ್ಯಾದಿ ಅನಿವಾರ್ಯವಲ್ಲ. ವೇದಸೂಕ್ತಗಳನ್ನು ಕಂಠಪಾಠ ಮಾಡುವ ಅವಶ್ಯಕತೆಯಿಲ್ಲ. ನಿರ್ದಿಷ್ಟ ವಾದ ಸ್ವರಪ್ರಸ್ತಾರಕ್ಕೆ ಸರಿಯಾಗಿ ಪಾರಾಯಣ ಮಾಡುವುದು ಎಂದರೆ ಶ್ರದ್ಧೆಯಿಂದ ಓದುವುದು. ಬೆಂಗಳೂರಿನ ಎಲ್ಲಾ ಬ್ರಾಹ್ಮಣ ವರ್ಗದ ಸ್ತ್ರೀ ಪುರುಷರು, ಬಾಲಕ, ಬಾಲಕಿಯರು, ಯುವಕರು, ಗೃಹಸ್ಥರು, ನಿವೃತ್ತಿ ಹೊಂದಿದವರು ಇವರಿಗೆಲ್ಲಾ ಪರಮಾತ್ಮ ಜ್ಞಾನವನ್ನು ಮನೆಬಾಗಿಲಿನಲ್ಲಿ ಪಡೆಯುವ ಒಂದು ಸುವರ್ಣಾವಕಾಶವಿದು. 'ಗುರುಕುಲ'ದ ಬಾಗಿಲು ಇವರೆಲ್ಲರನ್ನು ಸ್ವಾಗತಿಸುತ್ತದೆ. 100 ರೂಪಾಯಿ ಬೆಲೆಯ ಕನ್ನಡ ಲಿಪಿಯಲ್ಲಿ ಶ್ರೀ ರಾಮಕೃಷ್ಣ ಆಶ್ರಮ ಮೈಸೂರು ಇವರು ಪ್ರಕಟಿಸಿದ 'ಸಸ್ವರ ವೇದಮಂತ್ರಾ' ಎಂಬ ಪುಸ್ತಕವನ್ನು ಖರೀದಿಸುವುದನ್ನು ಹೊರತಾಗಿ ಬೇರೆ ಎಲ್ಲಾ ಸೇವೆ ಉಚಿತ, ಮುಕ್ತ.

ನೊಂದಣಿ ಮಾಡಿಕೊಳ್ಳಲು ಶ್ರೀ ಸಬೀತಾ ಎಸ್.ರಾವ್, ಸಂಚಾಲಕರು (ಮೊ.94498 18738) ಇವರನ್ನು, ವಿದ್ಯಾರ್ಥಿಗಳಾದ ಶರತ್ ಆಕಿರೆಕಾಡು (97416 88556), ಮುರಳೀಧರ ರಾವ್ (9900217071), ರವಿಪ್ರಸಾದ ಶರ್ಮ (9880241499) ಇವರನ್ನು ಸಂಪರ್ಕಿಸಬಹುದು. ಪಾಠಪಟ್ಟಿಯ ವಿವರಗಳಿಗೆ ಶ್ರೀ ಜಿ.ಕೆ.ರಾವ್ (ಅಧ್ಯಾಪಕರು) ಇವರನ್ನು 08023230992, 9448206073 ದೂರವಾಣಿಗಳಲ್ಲಿ ರಾತ್ರಿ 8ರಿಂದ 10ರವರೆಗೆ ಸಂಪರ್ಕಿಸಬಹುದು.


*ನೀವೂ ಬನ್ನಿರಿ, ಇತರರನ್ನೂ ಕರೆ ತನ್ನಿರಿ*
*ನಾವೆಲ್ಲರೂ ವೇದಜ್ಞಾನಾಮೃತವನ್ನು ಸವಿದು*
*ಬದುಕನ್ನು ಸಾರ್ಥಕ ಪಡಿಸೋಣ*
*ನಮ್ಮ ಆತ್ಮದಲ್ಲಿ ಪರಮಾತ್ಮದರ್ಶನ ಪಡೆಯೋಣ*
*ಇದೇ 'ಸೋಹಂ' ಎಂಬ ಅನುಭೂತಿ ಲಕ್ಷ್ಯ*

ಸಮಸ್ತ ವೇದದ ಸಾರವಾಗಿರುವ ಈಶಾವಾಸ್ಯೋಪನಿಷತ್ತಿನ ಪ್ರಥಮ ಮಂತ್ರ 'ಗುರುಕುಲ'ದ ಪ್ರಾರ್ಥನಾಮು.

*॥ ಓಂ ಈಶಾ ವಾಸ್ಯಮಿದಗ್ಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್*
*ತೇನ ತ್ಯಕ್ತೇನ ಭುಂಜೀ ಥಾ ಮಾ ಗೃಧ ಕಸ್ಯಸ್ವಿದ್ಧನಮ್ ॥*
*। ಲೋಕಾ ಸಮಸ್ತಾಃ ಸುಖಿನೋ ಭವಂತು ।*
*। ಸಮಸ್ತ ಸನ್ಮಂಗಲಾನಿ ಭವಂತು ।*

*(ಗುರುಕುಲ ಪ್ರಕಟಣೆ)*

# ಧರ್ಮ ಧ್ವಜವನ್ನು ಎತ್ತಿ ಹಿಡಿದ ವಿಕರ್ಣ



## (ಪೌರಾಣಿಕ ಕಥೆ)

- ವೈ. ಶಂಕರನಾರಾಯಣ ರಾವ್, ಪಡುಬಿದ್ರಿ

ಬನ್ನಿರಿ ಬಾಂಧವರೇ, ನಾವೀಗ ಹಸ್ತಿನಾವತಿಯ ಭವ್ಯ ಸಭಾಭವನದೆಡೆಗೆ ಸಾಗಿ ಕಪಟದ್ಯೂತದಲ್ಲಿ ಪಾಂಡವರನ್ನು ಸೋಲಿಸಿ ಸರ್ವಸ್ವವನ್ನೂ ಸೂರೆಗೈದು ಸಂಭ್ರಮದಿಂದ ಬೀಗುತ್ತಿರುವ ಕೌರವೇಂದ್ರನ ಮುಂದಿನ ಸಭಾಕಲಾಪಗಳನ್ನು ವೀಕ್ಷಿಸೋಣ.

ಸಭಾಭವನದ ವೇದಿಕೆಯ ಮಧ್ಯದಲ್ಲಿರುವ ಉನ್ನತ ಸಿಂಹಾಸನದಲ್ಲಿ ಕೌರವ ಭೂಪಾಲ ಸುಯೋಧನನು ವಿರಾಜಮಾನನಾಗಿದ್ದಾನೆ. ಬಲ ಭಾಗದಲ್ಲಿ ಒಂದೆಡೆ ಬರಿಯ ನೆಲದಲ್ಲಿ ಸೋತ ಅವಮಾನದಿಂದ ಜಜ್ಜರಿತರಾಗಿ ತಲೆತಗ್ಗಿಸಿ ಕುಳಿತಿರುವ ಪಾಂಡವ ಸಹೋದರರಿದ್ದಾರೆ. ಭೀಷ್ಮ, ವಿದುರ ಮೊದಲಾದ ಜ್ಞಾನ ವೃದ್ಧರೂ ಧೃತರಾಷ್ಟ್ರನೂ ಮುಂಚೂಣಿಯಲ್ಲಿದ್ದು ಉಚಿತಾಸನಗಳಲ್ಲಿ ಮಂಡಿಸಿದ್ದಾರೆ. ದ್ರೋಣ, ಕೃಪ, ವಿಕರ್ಣ ಮೊದಲಾದ ಬುಧಜನರೂ, ಸೂರಿಗಳೂ, ಸಾಮಂತ ರಾಜರುಗಳೂ ಉಭಯ ಪಾರ್ಶ್ವಗಳಲ್ಲಿ ತಂತಮ್ಮ ಪೀಠಗಳಲ್ಲಿ ಆಸೀನರಾಗಿದ್ದಾರೆ. ವೇದಿಕೆಯ ಎಡಭಾಗದಲ್ಲಿ ಕೌರವ ಸಹೋದರರಿಂದ ವೇಷ್ಟಿತನಾದ ದುಶ್ಶಾಸನನಿದ್ದಾನೆ. ಕರ್ಣ, ಸೈಂಧವರೆಂಬ ಖಳರೂ ಅವರ ಬೆಂಬಲಕ್ಕೆ ನಿಂತಿದ್ದಾರೆ. ಎಲ್ಲರ ಮೊಗಗಳಲ್ಲೂ ಅರಸನ ಮುಂದಿನ ನಡೆಗಳೇನು ಎಂದು ಅರಿಯುವ ಕುತೂಹಲದ ಉದ್ವೇಗವಿದೆ.

ಇದೀಗ ಸುಯೋಧನನು ಸಭಾವಿಸ್ತಾರಕ್ಕೆ ಒಮ್ಮೆ ಕಣ್ಣು ಹಾಯಿಸಿ ವಿದುರನನ್ನು ಉದ್ದೇಶಿಸಿ ದ್ರೌಪದಿಯನ್ನು ಸಭಾಭವನಕ್ಕೆ ಕರೆತರುವಂತೆ ಆಜ್ಞಾಪಿಸಿದನು. ವಿದುರನು ಇದಕ್ಕೊಪ್ಪದೆ ದ್ರೌಪದಿಯನ್ನು ಅವಮಾನಿಸುವುದರಿಂದ ಕೌರವರ ಸರ್ವನಾಶವಾಗುವುದೆಂದು ಎಚ್ಚರಿಸಿ ಹಲವು ಹಿತ ನುಡಿಗಳನ್ನಾಡಿ ವಿರೋಧಿಸಿದನು. ಇದಕ್ಕೆ ಕಿವಿಗೊಡದೆ ಕೌರವನು ಧೂತನೊಬ್ಬನನ್ನು ಕರೆಸಿ ದ್ರೌಪದಿಯನ್ನು ಕರೆತರುವಂತೆ ನೇಮಿಸಿದನು. ದೂತನು ಪಾಂಚಾಲೆಯನ್ನು ಕಂಡು ಧರ್ಮರಾಯನು ದ್ಯೂತದಲ್ಲಿ ಸಮಸ್ತವನ್ನೂ ಕಳೆದುಕೊಂಡು ಆಕೆಯನ್ನೂ ಪಣಕ್ಕೊಡ್ಡಿ ಸೋತಿರುವುದನ್ನೂ ಕೌರವನ ಆಜ್ಞೆಯನ್ನು ತಿಳಿಸಿದನು. ಧರ್ಮಜನು ತನ್ನನ್ನು ತಾನೇ ಮೊದಲು ಸೋತು ದಾಸನಾದ ಬಳಿಕ ಪತ್ನಿಯನ್ನು ಸೋತವನಾದುದರಿಂದ ಇದು ಧರ್ಮಸಮ್ಮತವೇ ಎಂಬುದನ್ನು ಪ್ರಾಜ್ಞರಿರುವ ಆ ಸಭೆಯಲ್ಲಿ ನಿರ್ಣಯಿಸಿದ ಮೇಲೆ ತಾನು ಬರುವೆನೆಂದು ಆಕೆ ದೂತನೊಡನೆ ಹೇಳಿ ಕಳುಹಿಸಿದಳು. ಇದನ್ನು ಕೇಳಿ ಕಿಡಿಕಿಡಿಯಾದ ಕೌರವನು ತಮ್ಮನಾದ ದುಶ್ಶಾಸನನ್ನು ಕರೆದು “ದ್ರೌಪದಿಯೀಗ ನಮ್ಮ ದಾಸಿ. ಅವಳಿಗೆ ಮಾಡಬೇಕಾದ ಸನ್ಮಾನವನ್ನು ಮಾಡಿಯೇ ತೀರುತ್ತೇವೆ. ನಮ್ಮ ತೊತ್ತಿನ ಲಾಯದಲ್ಲಿ ಬಿದ್ದಿರಲಿ. ಆಕೆಯನ್ನು ಎಳೆದುಕೊಂಡು ಬಾ” ಎಂದು ಆಜ್ಞಾಪಿಸಿದನು.

ಅರಮನೆಯ ಕಾಪಿನ ಭಟರು ತಡೆದರೂ ಅವರನ್ನು ಕಟಾರಿಯಿಂದ ತಿವಿದು ದೂಡಿ ದುಶ್ಶಾಸನನು ಅಂತಃಪುರವನ್ನು ಪ್ರವೇಶಿಸಿ “ಎಲೇ ತೊತ್ತೇ, ಪಾಂಡವರರಸಿ ಎಂಬ ನಿನ್ನ ಅಹಂಭಾವವನ್ನು ಮರೆಯದಿರು. ನಡೆ.. ನಡೆ..” ಎಂದು ಅಬ್ಬರಿಸಿದನು. ಪಾಂಚಾಲೆಯು ದೀನಳಾಗಿ “ದುಶ್ಶಾಸನನೇ, ಮೈದುನ ನಾದ ನೀನು ಬಂದು ಒಳಿತನ್ನೇ ಮಾಡಿದೆ. ಧರ್ಮರಾಯನು ಸೋತರೆ ಸೋಲಲಿ. ಆದರೆ ನನ್ನ ಪ್ರಶ್ನೆಗೆ ಉತ್ತರವಿನ್ನೂ ದೊರೆತಿಲ್ಲ. ಅಲ್ಲದೆ ನಾನೀಗ ಪುಷ್ಪವತಿ (ರಜಸ್ವಲೆ) ಬೇರೆ. ಈ ಪರಿಸ್ಥಿತಿಯಲ್ಲಿ ನಾನು ಸಭೆಯನ್ನು ಪ್ರವೇಶಿಸುವುದು ಉಚಿತವೇ ಹೇಳು” ಎಂದು ನುಡಿದಳು. ಆಗ ದುಶ್ಶಾಸನನು “ನೀನು ಪುಷ್ಪವತಿಯಾದರೆ ಕೌರವನ ಅಂತಃಪುರದಲ್ಲಿ ಫಲವತಿ (ಗರ್ಭಿಣಿ)ಯಾಗುವಿಯಂತೆ. ಬಣ್ಣದ ಮಾತುಗಳನ್ನಾಡಿ ನಿನ್ನ ವಿದ್ವತ್ತನ್ನು ನಮ್ಮಲ್ಲಿ ತೋರಿಸಬೇಡ. ನಡೆ”. ಎಂದು ಕಟಕಿಗಳನ್ನಾಡಿ ಅವಳ ಸಿರಿಮುಡಿಗೆ ಕೈಯಿಕ್ಕಿದನು. ಅವನು ಮುಡಿಯನ್ನು ಹಿಡಿದು ಎಳೆದ ಭರಕ್ಕೆ ಪಾಂಚಾಲೆಯ ಆಭರಣಗಳು, ಕರ್ಣಾಭರಣಗಳು ಹರಿದು ಮುತ್ತು, ರತ್ನ, ಮಣಿಗಳು ಧರೆಯಲ್ಲಿ ಸಿಡಿದು ಚೆಲ್ಲಾಡಿದವು. ಅವಳ ದಾಸಿಯರು, ಸಖಿಯರು ಕಾಲಿಗೆ ಬಿದ್ದು ಆಕೆಯನ್ನು ಬಿಟ್ಟು ಬಿಡುವಂತೆ ಎಷ್ಟೇ ಬೇಡಿಕೊಂಡರೂ ಒಪ್ಪದೆ ಅವರನ್ನು ಝಾಡಿಸಿ ಒದ್ದನು. ನಂತರ ದ್ರೌಪದಿಯ ಮುಡಿಯನ್ನು ಮುಷ್ಟಿಯಲ್ಲಿ ಹಿಡಿದೆಳೆಯುತ್ತಾ ರಾಜಬೀದಿ ಯಲ್ಲಿ ದರದರನು ನಡೆಸಿಕೊಂಡು ರಾಜಸಭೆಗೆ ಕರೆದು ತಂದನು. ಇದರಿಂದ ಕೆರಳಿದ ಭೀಮಾರ್ಜುನರು ಅವನ ಕರುಳನ್ನು ಬಗೆವೆವೆಂದು ಮೇಲೇಳುವುದರಲ್ಲಿದ್ದಾಗ ಧರ್ಮರಾಯನು ಅವರನ್ನು ಕಣ್ಸನ್ನೆಯಿಂದಲೇ ತಡೆದನು. ಸುಯೋಧನನ ಆಜ್ಞೆಯಾದ ಬಳಿಕ ದುಶ್ಶಾಸನನು ಮುಡಿಯಿಂದ ಮುಷ್ಟಿಯನ್ನು ಸಡಿಲಿಸಿ ಮುಕ್ತಗೊಳಿಸಿದನು.

ದ್ರೌಪದಿಯು ದಿಟ್ಟತನದಿಂದ ಸಭೆಯಲ್ಲಿದ್ದ ಗುರು-ಹಿರಿಯರನ್ನು ಉದ್ದೇಶಿಸಿ “ಪೂಜ್ಯರೇ, ಧರ್ಮಜನು ತನ್ನನ್ನು ತಾನೇ ಸೋತು ದುರ್ಯೋಧನನ ದಾಸನಾದ ಮೇಲೆ ನನ್ನನ್ನು ಪಣವಾಗಿಡಲು ಸಾಧ್ಯವೇ? ದಾಸನಾದವನಿಗೆ ಯಾವುದರಲ್ಲಿಯೂ ತನ್ನದೇ ನಿರ್ಧಾರ ತೆಗೆದುಕೊಳ್ಳುವ ಸ್ವಾತಂತ್ರ್ಯವಿರುವುದಿಲ್ಲವಲ್ಲ. ನಿಮ್ಮಲ್ಲಿ ನನ್ನಂತಹ ಅಬಲೆಯ ತಂದೆ, ಮಾವಂದಿರು ಇರಬಹುದು. ನನ್ನನ್ನು ತಮ್ಮ ಪುತ್ರಿಯಂತೆ ಪರಿಗಣಿಸಿ ನಿಮ್ಮ ಅಭಿಪ್ರಾಯವನ್ನು ಹೇಳಿರಿ” ಎಂದು ಬೇಡಿಕೊಂಡಳು. ಆಗ ಕರ್ಣನು “ಪಾಂಚಾಲೆಯೇ, ನೀನು ನಿನ್ನ ಪಂಚ ಪತಿಯರ ಸಹವಾಸದಲ್ಲಿ ಸಾಕಷ್ಟು ಕಷ್ಟ- ನಷ್ಟಗಳನ್ನು ಅನುಭವಿಸಿರುವೆ. ಇಂದು ನಿನ್ನ ಸಂಕಷ್ಟಗಳೆಲ್ಲವೂ ದೂರಾದವು. ಕೌರವ ರಾಯನ ಅನುಗ್ರಹವಾಗಿದೆ. ನಮ್ಮ ಅರಸನು ತಾನೊಲಿದ ವನಿತೆಯರಿಗೆ ಮೊಗೆ-ಮೊಗೆದು ಕೊಡುವಷ್ಟು ಸಂಪನ್ನನು; ಉದಾರಿಯು. ಅವನ ಅಂತಃಪುರವನ್ನು ಸೇರಿ ವಿಲಾಸಿನಿ ಯಾಗಿದ್ದುಕೊಂಡು ವಿಪ್ರಳ ಸುಖವನ್ನು ಅನುಭವಿಸು” ಎಂದು ಭಂಡು ಮಾತುಗಳನ್ನಾಡಿದನು.

ಆಗ ಭೀಷ್ಮರು ತಮ್ಮ ಆಸನದಿಂದೆದ್ದು ಅವನ ಮಾತನ್ನು ಖಂಡಿಸಿ “ಧರ್ಮರಾಯನು ಸತ್ಯ-ಧರ್ಮದ ಜಾಡನ್ನು ಬಿಡೆನೆಂದು ಸಮ್ಮನಿರುವನು. ಕೌರವರ ಪಾಪದ ಕೊಡ ತುಂಬಲೆಂದು ಸಹನೆಯಿಂದ ಕಾಯುತ್ತಿರು ವನು. ಪಾಂಚಾಲೆಯ ಪ್ರಶ್ನೆಗೆ ಉತ್ತರಿಸಲಾಗದೇ ಏನನ್ನೋ ಗಳುಹಬೇಡ” ಎಂದು ನುಡಿದು ಆತನನ್ನು ಸುಮ್ಮನಾಗಿಸಿದರು. ಸುಯೋಧನನು “ಪಾಂಡವರು ಈ ಹೆಣ್ಣನ್ನು ಸೋತ ಬಳಿಕ ಅವಳು ನಮ್ಮ ದಾಸಿ. ನೀವು ಮಾತನಾಡದೆ ಸುಮ್ಮನಿರಿ” ಎಂದು ಭೀಷ್ಮ ಕೃಪಾದಿಗಳನ್ನು ಜರೆದನು. ಈ ಹಂತದಲ್ಲಿ ಭೀಮನು ಸುಮ್ಮನಿರುವ ಅಣ್ಣ ಧರ್ಮರಾಯನ ಮೇಲೆ ಕೋಪಿಸಿಕೊಂಡು ಆತನ ತೋಳುಗಳನ್ನು ಸುಡುವೆನೆಂದು ಬೆಂಕಿಯನ್ನು ತರುವಂತೆ ಸಹದೇವನಿಗೆ ಆಜ್ಞಾಪಿಸಿದನು. ಆಗ ಅರ್ಜುನನು ಅವನನ್ನು ತಡೆದು “ಧರ್ಮರಾಯನೇ ನಮಗೆ ದ್ರೌಪದಿ ಸಹಿತವಾದ ಸಕಲ ಸಿರಿ-ಸಂಪತ್ತು. ಅವನನ್ನು ಬಿಟ್ಟು ನಮಗೆ ಬೇರೆ ಗತಿಯಿಲ್ಲ” ಎಂದು ಸಮಾಧಾನಪಡಿಸಿದನು. ಆಗ ಭೀಮನು ತಮ್ಮೆಲ್ಲರನ್ನೂ ಈ ಅವಸ್ಥೆಗೆ ತಂದೊಡ್ಡಿದ ಕೌರವ ಕುನ್ನಿಗಳ ಎಲುಬುಗಳನ್ನು ಮುರಿದು ಪುಡಿಗಟ್ಟುವೆನೆಂದೂ, ಇದು ಸಾಧ್ಯವಾಗದಿದ್ದರೆ ತನ್ನ ಕೈಗಳನ್ನೇ ತಾನು ಸುಟ್ಟುಕೊಳ್ಳುವೆನೆಂದೂ ಪ್ರತಿಜ್ಞೆ ಮಾಡಿದನು.

ಅಂತೂ ಪಾಂಚಾಲೆಯ ಪ್ರಶ್ನೆಗೆ ಸಭಾಸದರಾರೂ ಉತ್ತರಿಸುವ ಗೋಜಿಗೆ ಹೋಗಲಿಲ್ಲ. ಆಗ ವಿಕರ್ಣನು ತನ್ನ ಪೀಠದಿಂದ ಎದ್ದು “ಪೂಜ್ಯ ಸಭಾಸದರೇ, ಪಾಂಚಾಲೆ ಯಜ್ಞ ಕುಂಡದಿಂದ ಆವಿರ್ಭವಿಸಿದ ದಿವ್ಯ ಅಗ್ನಿ ಕನ್ಯೆ. ಪರಿಶುದ್ಧಳಾದ ಮಹಾಪತಿವ್ರತೆ. ಆಕೆ ಧರ್ಮದೇವತೆಯ ಮೂರ್ತಿ ಸ್ವರೂಪಳು. ತಮ್ಮಲ್ಲಿ ಹಲವರು ಸೂರಿಗಳಿದ್ದಾರೆ. ಯಾರಾದರೂ ಉತ್ತರಿಸಿರಿ. ಪೂಜ್ಯ ದ್ರೋಣ, ಕೃಪಾಚಾರ್ಯರುಗಳೇ, ಪ್ರಾಜ್ಞರಾದ ತಾವು ಗಳಿದ್ದೀರಿ. ತಾವಾದರೂ ಪಾಂಚಾಲೆಯ ಪ್ರಶ್ನೆಗೆ ಉತ್ತರಿಸಿರಿ. ಅಥವಾ ಭೀಷ್ಮ ವಿದುರರಂತಹ ಜ್ಞಾನ ವೃದ್ಧರಿದ್ದಾರೆ. ಅವರಾದರೂ ಉತ್ತರಿಸಲಿ. ಲಂಪಟ ದುರ್ಯೋಧನನ ದುರ್ನಡತೆಗೆ ತಡೆಯೊಡ್ಡಿರಿ” ಎಂದು ಕೈ ಮುಗಿದು ಬೇಡಿಕೊಂಡನು. ಆಗ ದ್ರೋಣರು “ಮಗಳೇ ಪಾಂಚಾಲೇ, ಧರ್ಮವು ಬಹಳ ಸೂಕ್ಷ್ಮವಾದದ್ದು. ಅದು ಒಬ್ಬಿಬ್ಬರಿಂದ ನಿರ್ಣಯಿಸಲ್ಪಡತಕ್ಕದ್ದಲ್ಲ. ಅದನ್ನು ತೀರ್ಮಾನಿಸಲು ಪ್ರಾಜ್ಞರ ಪ್ರತ್ಯೇಕ ಸಭೆಯನ್ನೇ ಕರೆಯಬೇಕಾಗುವುದು. ಧರ್ಮರಾಯನು ಸ್ವಇಚ್ಛೆಯಿಂದಲೇ ದ್ಯೂತವನ್ನಾಡಿ ಸೋತಿದ್ದಾನೆ. ಆತ ಮೊದಲು ತನ್ನನ್ನು ತಾನೇ ಸೋತಿರುವುದು ನಿಜವಾದರೂ ನಂತರ ನಿನ್ನನ್ನು ಪಣವಾಗಿಟ್ಟದ್ದು ತಪ್ಪೆಂದು ಹೇಳುವುದು ಕಷ್ಟ. ಏಕೆಂದರೆ ನೀನು ಆತನ ಪತ್ನಿ. ಧರ್ಮರಾಯನೇ ಸ್ವತಃ ಕಂಡಿರುವಂತೆ ನಾವು ದುಯೋಧನನಿಗೆ ಹೇಳಬೇಕಾದ ನೀತಿಗಳನ್ನೆಲ್ಲಾ ಹೇಳಿದ್ದೇವೆ. ಧರ್ಮಾತ್ಮನಾದ ಧರ್ಮಜನೇ ಪ್ರತಿಭಟಿಸದೆ ಇರುವಾಗ ನಾವೆಷ್ಟರವರು” ಎಂದು ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ನುಡಿದರು. ಭೀಷ್ಮರೂ ಇದನ್ನು ಅನುಮೋದಿಸಿ ತಾವು ಉಂಡ ಕೌರವನ ಜೋಳದ ಪಾಳಿಗೆ ನ್ಯಾಯ ಒದಗಿಸಿದರು.

ಆಗ ವಿಕರ್ಣನೆದ್ದು ಘಂಟಾಘೋಷವಾಗಿ ತನ್ನ ಅಭಿಪ್ರಾಯವನ್ನು ಹೀಗೆಂದು ಹೇಳಿದನು. “ಸಭಾಸದರೇ, ಕುರುಪುಂಗವರೇ, ನೀವು ದ್ರೌಪದಿ ಕೇಳಿದ ಪ್ರಶ್ನೆಗೆ ಉತ್ತರವನ್ನೀಯಿರಿ ಇಲ್ಲವೇ ಉತ್ತರವನ್ನೀಯದಿರಿ. ನಾನೀ ವಿಷಯದಲ್ಲಿ ಸರಿ ಅನ್ನಿಸಿದ್ದನ್ನು ಹೇಳಿಬಿಡುವೆನು. ದ್ಯೂತವೆಂಬುದು ಮಾನವನನ್ನು ಧರ್ಮಭ್ರಷ್ಟನನ್ನಾಗಿ ಮಾಡುತ್ತದೆ. ಇದಕ್ಕೆ ಧರ್ಮಜನೂ ಹೊರತಲ್ಲ. ತನ್ನನ್ನು ತಾನೇ ಸೋತ ಮೇಲೆ ಧರ್ಮಜನು ದ್ರೌಪದಿಯನ್ನು ಪಣವಾಗಿಟ್ಟದ್ದು ತಪ್ಪು. ಒಂದು ವೇಳೆ ದಾಸನಾದವನಿಗೂ ಸತಿಯ ಮೇಲೆ ಅಧಿಕಾರವಿರುವುದು ಎಂದಾದಲ್ಲಿ ದ್ರೌಪದಿ ಪಾಂಡವರೆಲ್ಲರ ಪತ್ನಿ. ಈ ಬಗ್ಗೆ ಧರ್ಮಜನೊಬ್ಬನೇ ನಿರ್ಧರಿಸಿದ್ದು ತಪ್ಪು. ಆದುದರಿಂದ ಹೇಗೆಯೇ ಪರಿಶೀಲಿಸಿದರೂ ದ್ರೌಪದಿಯನ್ನು ಶಕುನಿ ಧರ್ಮಪೂರ್ವಕವಾಗಿ ಗೆದ್ದಂತಾಗಲಿಲ್ಲ ಮತ್ತು ಅವಳು ದಾಸಿಯಲ್ಲ ಎಂದು ನನ್ನ ಅಭಿಪ್ರಾಯ”. ಒಡನೆಯೇ ಸಭಾಸದರ ಒಂದು ವರ್ಗದಿಂದ ಕೋಲಾಹಲ ವೆದ್ದು “ಸಾಧು-ಸಾಧು (ಸರಿ-ಸರಿ) ಎಂಬ ಒಮ್ಮತದ ಮಾತುಗಳಿಂದ ವಿಕರ್ಣನಿಗೆ ಬೆಂಬಲ ದೊರಕಿತು.

ಈ ಮಾತುಗಳನ್ನು ಕೇಳಿದ ಕೌರವನ ಆಪ್ತ ಮಿತ್ರ ಕರ್ಣನು ಸಿಡಿದೆದ್ದು “ಎಲೇ ವಿಕರ್ಣನೇ, ಅತಿಯಾದ ಬಾಯಿ ಬಡಕನಾಗದಿರು. ಭೀಷ್ಮ, ದ್ರೋಣಾದಿಗಳೇ ಸಮ್ಮನಿದ್ದಾರೆ. ಧರ್ಮನೀತಿಯನ್ನು ಉಸುರಲು ನೀನು ಮಹಾ ಪಂಡಿತನೇನು? ಏಕಪತಿ ಬಹುಸತಿ ಯರೆಂಬುದು ಲೋಕರೂಢಿ. ಏಕಸತಿಗೆ ಬಹುಪತಿಯರಿರುವುದನ್ನು ಪಾಂಡವರೆಂಬ ಈ ಕುಮಾರ್ಗಿಗಳಲ್ಲಿ ಕಂಡೆವು. ಇದು ಲೋಕ ಧರ್ಮವೇ? ಸುಯೋಧನನೊಡನೆ ಒಡ ಹುಟ್ಟಿದ ಅನುಜನಾದುದರಿಂದ ನಿನ್ನನ್ನು ಇಷ್ಟರಲ್ಲಿಯೇ ಬಿಟ್ಟಿದ್ದೇವೆ. ಹೋಗು. ಬದುಕಿಕೋ” ಎಂದು ಆರ್ಭಟಿಸಿದನು. ಸುಯೋಧನನೂ ಆತನೊಡನೆ ದನಿಗೂಡಿಸಿ ವಿಕರ್ಣನನ್ನು ಕುರುಕುಲ ಕುಠಾರನೆಂದೂ, ಹೊಟ್ಟೆ ಹೊರೆಯುವುದಕ್ಕಷ್ಟೇ ಕೌರವರ ಜತೆಗಿರುವವನೆಂದೂ ಹಂಗಿಸಿದನು. ತದನಂತರ ಕೌರವನು ಪಾಂಡವರತ್ತ ಬೆಟ್ಟು ತೋರಿಸಿ “ಈ ದಾಸಿ-ದಾಸರುಗಳಿಗೆ ಶೃಂಗಾರ ವೇಕೆ? ಅವರ ಆಭರಣ, ವಸ್ತ್ರಾದಿಗಳನ್ನು ಕಳಚು” ಎಂದು ದುಶ್ಶಾಸನನಿಗೆ ಆಜ್ಞಾಪಿಸಿದನು. ಪಾಂಡವರೈವರೂ, ದ್ರೌಪದಿಯೂ ತಂತಮ್ಮ ಆಭರಣಗಳನ್ನು, ಕಿರೀಟಗಳನ್ನೂ ಸ್ವಯಂ ಪ್ರೇರಿತರಾಗಿ ಕಳಚಿಟ್ಟು ಉಟ್ಟಬಟ್ಟೆಗಳಲ್ಲಿಯೇ ಸಾಲಭಂಜಿಕೆಗಳಂತೆ ನಿಂತಿದ್ದರು. ಅಷ್ಟರಲ್ಲಿ ವಿಗಡ ದುಶ್ಶಾಸನನು ಬಂದು ದ್ರೌಪದಿಯ ಸೆರಗಿಗೆ ಕೈಯಿಕ್ಕಿದನು.

ಧರ್ಮಿಷ್ಠನಾದ ವಿಕರ್ಣನು ಇದನ್ನು ಸಹಿಸದೆ ಎದ್ದುನಿಂತು “ಅಗ್ರಜನಾದ ಸುಯೋಧನನೇ, ಅತ್ತಿಗೆ ಎಂದರೆ ಯಾರೆಂದು ತಿಳಿದಿರುವೆ? ಸಾಕ್ಷಾತ್ ಹೆತ್ತಬ್ಬೆಗೆ ಸಮಾನ. ಹೆತ್ತಬ್ಬೆಯ ಮಾನಹಾನಿಗೆ ಪ್ರಯತ್ನಿಸಿದವರುಂಟೇ? ಈ ಹೀನ ಕೃತ್ಯಕ್ಕೆ ಆಜ್ಞಾಪಿಸಿದ ನಿನ್ನಿಂದಾಗಿ ಕೌರವರಾದ ನಮಗೆಲ್ಲರಿಗೂ ಏಳೇಳು ಜನ್ಮಗಳ ರೌರವ ಶಿಕ್ಷೆ ಕಾದಿದೆ. ಈ ವಾರ್ತೆಯನ್ನರಿಯುವ ಪ್ರಜೆಗಳು ಕೌರವರನ್ನು ನಿಂದಿಸಿ ಹಸ್ತಿನಾವತಿಯತ್ತ ಮುಖ ತಿರುಗಿಸಿ ಛೀ, ಥೂ ಛೀ, ಥೂ ಎಂದು ಉಗುಳುವರು. ಇಂದಿನ ಈ ನಿನ್ನ ನಾಚಿಕೆಗೇಡಿನ ದುಷ್ಕೃತ್ಯವು ಭರತವಂಶದ ಇತಿಹಾಸದಲ್ಲಿ ಒಂದು ಕಲಂಕಿತ ಕರಾಳ ಅಧ್ಯಾಯವೆನಿಸಿ ಅಚ್ಚಳಿಯದೆ ಸ್ಥಿರವಾಗಿ ಉಳಿಯುವುದು. ಈ ಪಾಪಿ ಕಣ್ಣುಗಳಿಂದ ಮುಂದೆ ನಡೆಯಲಿರುವ ಪಾಪ ಕೃತ್ಯಗಳನ್ನು ನಾನು ನೋಡಲಾರೆನು. ಓರ್ವ ಅಬಲೆಯ ಪ್ರಶ್ನೆಗೆ ಉತ್ತರಿಸಲಾಗದಷ್ಟು, ಧರ್ಮ-ನೀತಿ ಏನಿದೆ ಎಂಬುದು ವಿವರಿಸಲಾಗದಷ್ಟು ಅಜ್ಞರಿರುವ ಈ ಸಭೆಯಲ್ಲಿ ನಾನಿನ್ನು ಅರೆಕ್ಷಣವೂ ನಿಲ್ಲಲಾರೆನು” ಎಂದು ಎತ್ತರಿಸಿದ ದನಿಯಲ್ಲಿ ಸಿಂಹಘರ್ಜನೆಯಿಂದ ನುಡಿದು ದೃಢವಾದ ಹೆಜ್ಜೆಗಳನ್ನಿಡುತ್ತಾ ಸಭಾತ್ಯಾಗ ಮಾಡಿದನು. ಪಾಂಡವರೈವರೂ ಮೆಚ್ಚುಗೆಯಿಂದ ತಲೆದೂಗುತ್ತಿರಲು, ಸಭಾಸದರೆಲ್ಲರೂ ಕುಳಿತಲ್ಲೇ ಮರವಟ್ಟು ಬೆಕ್ಕಸಬೆರಗಾಗಿ ಆತನು ನಿರ್ಗಮಿಸುವುದನ್ನೇ ನೋಡುತ್ತಿದ್ದರು.

ಮುಂದೆ ದುರ್ಯೋಧನನ ಆಜ್ಞೆಯಂತೆ ಖಳ ದುಶ್ಶಾಸನನು ಪಾಂಚಾಲೆಯ ಸೆರಗನ್ನು ಸೆಳೆಯಲು ಉಪಕ್ರಮಿಸಿದನು.

*ಅಳುಕಿದನೆ ಸುಡಲವನ ಮೇಲುದ*
*ಸೆಳೆದನುನ್ನತ ಕುಚವ ನಳಿತೋ*
*ಳ್ಗಳಲಿ ಮುಚ್ಚಿದಳಬಲೆ ಬೆಚ್ಚಿದಳವನ ನಿಷ್ಠುರಕೆ*
*ಕಳವಳಿಸಿದಳು ಬೆರಳಿನಲಿ ದೃಗು*
*ಜಲವ ಬಿದುರುತ ನೋಡಿದಳು ನೃಪ*
*ತಿಲಕನನು ಭೀಮಾರ್ಜುನರ ಮಾದ್ರೀ ಕುಮಾರಕರ*

ಎಂದು ಈ ಸನ್ನಿವೇಶವನ್ನು ಮಹಾಕವಿ ಕುಮಾರವ್ಯಾಸನು ಕರುಣಾಜನಕವಾಗಿ ವರ್ಣಿಸಿದ್ದಾನೆ. “ಪತಿಗಳೆನ್ನನು ಮಾರಿ ಧರ್ಮಸ್ಥಿತಿಯ ಕೊಂಡರು. ಭೀಷ್ಮ ಮೊದಲಾದತಿರಥರು ಪರಹಿತವ ಬಿಸುಟರು ವ್ಯರ್ಥ ಭೀತಿಯಲಿ” ಎಂದು ಆಕೆ ವಿಷಾದಿಸಿದಳು. ಬಳಿಕ ಪಾಂಚಾಲೆಯು ಆರ್ತಳಾಗಿ ಬಹು ವಿಧಗಳಿಂದ ಪ್ರಲಾಪಿಸಿ, ಶ್ರೀಕೃಷ್ಣನ ಮೊರೆ ಹೋಗಲು ಆ ಕರುಣಾಳು ದೇವರ ದೇವನು ಅಕ್ಷಯಾಂಬರವಾಗುವಂತೆ ಅನುಗ್ರಹಿಸಿ ಅವಳ ಮಾನವನ್ನು ಕಾಪಾಡಿದನು.

ಕೌರವರಾಯನ ಈ ದುಷ್ಕೃತ್ಯವೇ ಪ್ರಬಲ ಹೇತುವಾಗಿ ಮುಂದೆ ಭರತಖಂಡದ ಅರಸರೆಲ್ಲರೂ ಭಾಗವಸಿದ ಮಹಾಭಾರತ ಮಹಾಸಮರಕ್ಕೆ ನಾಂದಿಯಾಯಿತು. ಧರ್ಮ ನೀತಿಗನುಸಾರವಾಗಿ ನಮ್ಮ ಕಥಾನಾಯಕನಾದ ವಿಕರ್ಣನೂ ಈ ಯುದ್ಧದಲ್ಲಿ ಭಾಗವಹಿಸಿ ತನ್ನ ಅಗ್ರಜನಾದ ದುರ್ಯೋಧನನ ಪರವಾಗಿ ಕಾದಿದನು. ಕಲಿ ಭೀಮನು ವಿಕರ್ಣನ ಸಹಿತ ನೂರ ಜನ ಕೌರವರನ್ನೂ ಒಬ್ಬೊಬ್ಬರನ್ನಾಗಿ ಕೊಂದು ತನ್ನ ಪ್ರತಿಜ್ಞೆಯನ್ನು ಪೂರೈಸಿ ಕೊಂಡನು. ವಿಕರ್ಣನನ್ನು ಕೊಂದಾದ ಬಳಿಕ ಕಠಿಣ ಹೃದಯಿಯಾದ ಭೀಮನಂತಹ ಭೀಮನೇ, ವಿಕರ್ಣನಂತಹ ಧರ್ಮಿಷ್ಠನನ್ನು ಕೂಡ ತಾನು ಕೊಲ್ಲಬೇಕಾಯಿತಲ್ಲ ಎಂದು ಹಳ ಹಳಿಸಿ ಕಣ್ಣೀರು ಸುರಿಸಿ ಮಮ್ಮಲ ಮರುಗಿದನಂತೆ.

ಕುರುಕ್ಷೇತ್ರದಲ್ಲಿ ನಡೆದ ಈ ಯುದ್ಧದಲ್ಲಿ ಹನ್ನೊಂದು ಅಕ್ಷೋಹಿಣಿ ಸೇನೆಯ ಸಹಿತ ಕೌರವರ ಸಮೂಲ ನಾಶವಾಯಿತು. ಏಳು ಅಕ್ಷೋಹಿಣಿ ಸೇನೆಯನ್ನೂ, ಬಂಧು ಬಾಂಧವರನ್ನೂ, ಗುರುಹಿರಿಯರನ್ನೂ, ಕರುಳಕುಡಿಗಳನ್ನೂ ಕಳೆದುಕೊಂಡು ಬಡವಾದ ಪಾಂಡವರು ಗೋಳುಗರೆಯುವ ವಿಧವೆಯರ, ಅನಾಥರ ಪಡೆಯನ್ನು ಕಟ್ಟಿಕೊಂಡು ಗೆದ್ದೂ ಸೋತರು. ನಾವಿಂದು ವಿಕರ್ಣನ ದಿವ್ಯ ಚೇತನಕ್ಕೆ ನಮಿಸೋಣವೇ? (ಮುಗಿಯಿತು)

(ಮಹಾಭಾರತ ಕಥಾ ಪ್ರಸಂಗದಲ್ಲಿ ಅತ್ಯಂತ ಕಡೆಗಣಿಸಲ್ಪಟ್ಟ, ಸಾಕಷ್ಟು ಆಧಾರಗಳಿಲ್ಲದ ಪಾತ್ರವೊಂದಿದ್ದರೆ ಅದು ವಿಕರ್ಣನದ್ದು. ಕೌರವರೆಲ್ಲರೂ ದುರುಳರು ಎಂಬ ಸಾರ್ವತ್ರೀಕರಣ ಸರಿಯಲ್ಲ. ನೂರು ಮಂದಿ ಕೌರವರಲ್ಲಿ ವಿಕರ್ಣನೆಂಬ ಧರ್ಮಾತ್ಮನೊಬ್ಬ ಇದ್ದನೆಂಬುದು ಆಶ್ಚರ್ಯಕರವಾದರೂ ಅಷ್ಟೇ ನಿಜ. ನಾಲ್ಕು ಭಾಗಗಳಲ್ಲಿ ಪ್ರಕಟವಾದ ಈ ಕಥಾಮಾಲಿಕೆಯಲ್ಲಿ ಬರುವ ಸುಜ್ಞಾನಿ, ಧರ್ಮಿಷ್ಠ ವಿಕರ್ಣನ ಪಾತ್ರಪೋಷಣೆಯಲ್ಲಿ ಲೇಖಕನ ಕಲ್ಪನೆಗಳೇ ಸಾಕಾರಗೊಂಡು ಮೂರ್ತೀಭವಿಸಿದೆ.)

# ತುಳುನಾಡಿನಲ್ಲಿ ಬ್ರಾಹ್ಮಣ್ಯ

ದಿ। ಪ್ರೊ। ಗುರುರಾಜ ಭಟ್ಟರ
ಕೃತಿಯಿಂದ ಸಂಗ್ರಹಿಸಿದ ಭಾಗ
ಸಂಗ್ರಹ : ಸಿ.ಎಸ್.ರಾವ್.

(ಹಿಂದಿನ ಸಂಚಿಕೆಯಿಂದ...)

ದಕ್ಷಿಣ ಭಾರತದಲ್ಲಿ ಸಾಮ್ರಾಜ್ಯ ಸ್ಥಾಪನೆಯನ್ನು ಮಾಡಿದವರಲ್ಲಿ ಮೊದಲನೆಯವರಾದ ಶಾತವಾಹನರು ಜಯಕ್ಕೆ ಸಾಕ್ಷಿಗಳಾಗಿದ್ದರು. ಶತವಾಹನ ಸಾಮ್ರಾಜ್ಯದ ಪರಾಕ್ರಮವು ಉಚ್ಚ ನೆಲೆಯಲ್ಲಿದ್ದಾಗ ಅದರ ವ್ಯಾಪ್ತಿಯು ಸಮುದ್ರದಿಂದ ಸಮುದ್ರಕ್ಕೆ ಹಬ್ಬಿತ್ತು. ಶಾತವಾಹನರ ಆಡಳಿತ ರಚನಾಕ್ರಮವು ಮೌರ್ಯರ ಆಡಳಿತ ರಚನಾಕ್ರಮವನ್ನೇ ಆಧಾರವಾಗಿಟ್ಟು ಕೊಂಡಿದ್ದಿತ್ತು. ಸಾಮ್ರಾಜ್ಯದಲ್ಲಿ ಶಾಂತಿಯನ್ನು ಶಿಸ್ತನ್ನೂ ನೆಲೆ ನಿಲ್ಲಿಸುವ ಹೊಣೆಗಾರಿಕೆಯನ್ನು ಹೊತ್ತ ಅಧಿಕಾರಿಗಳಿಗೆ ಮಹಾತಳವಾರರೆಂದೂ, ಅವರ ಕೆಳಪಟ್ಟ ಅಧಿಕಾರಿಗಳಿಗೆ ತಳವಾರರೆಂದೂ ಹೆಸರು. ಮಹಾಮಾತ್ರರು ಎಂಬ ಹೆಸರುಳ್ಳ ಅಧಿಕಾರಿಗಳು ರಾಜ್ಯಾಡಳಿತವನ್ನು ನಡೆಸುತ್ತಿದ್ದುದು ಮಾತ್ರವಲ್ಲದೆ ದುಷ್ಟವರ್ತಿಗಳನ್ನು ಖಂಡಿಸುತ್ತಿದ್ದರು. ರಾಯಭಾರಿಗಳ, ಖಜಾಂಚಿಗಳ, ಪಾರುಪತ್ಯಗಾರರ, ಲೆಕ್ಕಪತ್ರಗಳ ಸಂರಕ್ಷಕರ ಮತ್ತು ನಾಣ್ಯ ನಿರ್ಮಾಪಕರ ಕೆಲಸಗಳನ್ನೂ ಸಹ ನೋಡಿಕೊಳ್ಳುತ್ತಿದ್ದರು.

ಗ್ರಾಮ ಪ್ರದೇಶಗಳಲ್ಲಿ ಕೇಂದ್ರದ ಆಡಳಿತವು ಕಟ್ಟುಕಾವಲುಗಳಿಂದ ಕೂಡಿ ಕಠಿಣವಾಗಿರಲಿಲ್ಲ. ಉನ್ನತಾಧಿಕಾರಿಗಳ ಸಾಮಾನ್ಯ ಮೇಲ್ವಿಚಾರಣೆಗೊಳಪಟ್ಟು ಸ್ಥಳೀಯ ಆಡಳಿತೆಯು ಪಾಳೆಯಗಾರರ ಮತ್ತು ಜಹಗೀರುದಾರರ ಕೈಯಲ್ಲಿಯೂ ಇತ್ತು. ಪಾಳೆಯಗಾರರಲ್ಲಿ ಎಷ್ಟೋ ವರ್ಗಗಳಿದ್ದವು. ಅವರಲ್ಲಿ ಅತ್ಯುನ್ನತವಾದವನನ್ನು 'ರಾಜ' ಎಂದು ಕರೆಯಲಾಗುತ್ತಿತ್ತು.

ಈ ರಾಜನು ಹೆಚ್ಚು ಕಡಿಮೆ ಅರಸು ಸ್ಥಾನವನ್ನೇ ಹೊಂದಿದ್ದನು.

ಈ ರಾಜನು ನಾಣ್ಯಗಳನ್ನು ಸಹ ತನ್ನ ಹೆಸರಿನಲ್ಲಿಯೇ ಹೊರಡಿಸುತ್ತಿದ್ದನು. ಇಂತಹ 'ರಾಜ'ರಿಗಿಂತಲೂ ಅಂತಸ್ತಿನಲ್ಲಿ ಕಡಿಮೆಯಾದವರೆಂದರೆ 'ಮಹಾ ಭೋಜರು' ಮತ್ತು 'ಮಹಾರಥಿಗಳು'. ಇವರು ಪಶ್ಚಿಮ ಡೆಕ್ಕಾನಿನ ಕೆಲವು ವಂಶಕ್ಕೆ ಸೇರಿದ ವಂಶ ಪಾರಂಪರ್ಯಾನುಗತರಾದ ಮುಖಂಡರು. ಮತ್ತು ಕೊನೆಯದಾಗಿ ಮಹಾ ಸೇನಾಪತಿಗಳು. ಇವರ ಕರ್ತವ್ಯಗಳು ನಾನಾ ತೆರನಾಗಿದ್ದವು.

ಇವರಲ್ಲಿ ಕೆಲವರು ಸ್ಥಳೀಯ ರಾಜ್ಯಪಾಲರಾಗಿದ್ದರು. ಮತ್ತೆ ಕೆಲವರು ಕೇಂದ್ರ ಆಡಳಿತದಾರರಾಗಿದ್ದರು. ಇಷ್ಟು ಅನೇಕಾನೇಕ ಬಗೆಯ ಅಧಿಕಾರಿಗಳಿದ್ದರೂ ರಾಷ್ಟ್ರವು ಹೆಚ್ಚಿನ ಪ್ರಮಾಣದಲ್ಲಿ ಶಾಂತತೆಯನ್ನು ರಾಜ್ಯದಲ್ಲಿ ನೆಲೆಗೊಳಿಸುವ ಕಾರ್ಯದಲ್ಲಿ ಮಾತ್ರ ನಿರತವಾಗಿತ್ತು. ಏತಕ್ಕೆಂದರೆ ಆ ಕಾಲದಲ್ಲಿ ಆಧುನಿಕ ರಾಷ್ಟ್ರವು ನೆರವೇರಿಸುತ್ತಿರುವ ಅನೇಕಾನೇಕ ರಾಜ್ಯ ಪರಿಪಾಲನಾ ಕರ್ತವ್ಯಗಳನ್ನು ಸಮಾಜವೇ ತನ್ನ ತಲೆಯಮೇಲೆ ಹೊತ್ತು ನಿರ್ವಹಿಸುತ್ತಿತ್ತು.

ಸಮಾಜ ರಚನಾಕ್ರಮವನ್ನು ಕುರಿತು ವಿಚಾರಿಸುವಾಗ ದೇಶೀಯ ಸಮಾಜ ರಚನೆಯಲ್ಲಿ ವಿದೇಶಿಯರನ್ನು ಸಹ ಬೆರೆಸಿಕೊಳ್ಳುವುದೇ ಆ ಕಾಲದ ಒಂದು ಗಣನೀಯ ವೈಶಿಷ್ಟ್ಯವೆಂದು ಹೇಳಬಹುದು. ವಲಸೆ ಬಂದ ಗ್ರೀಕರೂ, ಶಕರೂ ವ್ಯಾಪಾರದ ಉದ್ದೇಶದಿಂದ ದೇಶದಲ್ಲಿ ನೆಲೆಸಿದ್ದರು. ಕಾಲಾನುಕಾಲದಲ್ಲಿ ಅವರು ಭಾರತೀಯ ನಡವಳಿಕೆಗಳನ್ನೂ, ಪದ್ಧತಿಗಳನ್ನೂ ಅನುಸರಿಸಿದರು. ಕೆಲವು ಗ್ರೀಕರಂತೂ ಭಾರತೀಯ ಸ್ತ್ರೀಯರನ್ನೇ ಮದುವೆ ಮಾಡಿಕೊಂಡು ತಾವೂ ಭಾರತೀಯ ರಚನಾಕ್ರಮದ ಒಂದು ಭಾಗವೇ ಆಗಿ ಹೋದರು. ತಾವು ಆಳರಸರಾಗಿದ್ದರೆಂಬ ರಾಜಕೀಯ ಸನ್ನಿವೇಶವನ್ನು ಮುಂದಿಟ್ಟು ಶಕರನ್ನು, ಹಿಂದೂ ಧರ್ಮದಲ್ಲಿ ಕ್ಷತ್ರಿಯರನ್ನಾಗಿ ಸೇರಿಸಿಕೊಳ್ಳಲಾಯಿತು.

ಬೌದ್ಧರು, ಜೈನರು ಮತ್ತು ಬ್ರಾಹ್ಮಣರು, ಉತ್ತರಭಾಗದಿಂದ ಶತವಾಹನರ ರಾಜ್ಯಗಳಲ್ಲಿ ಸರಾಗವಾಗಿ ಪ್ರವೇಶ ಮಾಡತೊಡಗಿದರೆಂಬುದರಲ್ಲಿಯೂ, ರಾಜಕೃಪೆಯನ್ನು ಪಡೆಯುವುದಕ್ಕಾಗಿ ಅವರಲ್ಲಿ ಒಬ್ಬರೊಡನೊಬ್ಬರಿಗೆ ಸ್ಪರ್ಧೆಯು ನಡೆಯುತ್ತಿತ್ತೆಂಬುದರಲ್ಲಿಯೂ ಎಳ್ಳಷ್ಟು ಸಂದೇಹವಿಲ್ಲ. ಬೌದ್ಧರು ಅಲ್ಪ ಸ್ವಲ್ಪ ರಾಜಾಶ್ರಯವನ್ನು ಪಡೆದರು. ಆದರೆ ಬ್ರಾಹ್ಮಣರು ಸ್ಪಷ್ಟವಾದ ರೀತಿಯಲ್ಲಿ ಅತಿ ಹೆಚ್ಚಿನ ರಾಜಕೃಪೆಯನ್ನು ಪಡೆದರು. ಶಾತವಾಹನರ ಕಾಲದಲ್ಲಿ ರಾಜಸ್ಥಾನಗಳಲ್ಲಿ ಆರ್ಯರ ಪ್ರಭಾವವು ಉಂಟಾಗುತ್ತಿದ್ದುದು ಮತ್ತು ಅವರ ಮೂಲಕ ಅದೇ ಪ್ರಭಾವವು ದೇಶದಲ್ಲೆಲ್ಲಾ ಹರಡುವುದು ಗಣನೀಯ ರೀತಿಯಲ್ಲಿ ಮುಂದುವರಿಯುತ್ತಿತ್ತು. ಮತಾಂತರ ಹೊಂದಿದ ಇತರರಂತೆ ಶಕರೂ ಸಹ ಬ್ರಾಹ್ಮಣರನ್ನೂ, ಅವರ ಸಂಸ್ಥೆಗಳನ್ನೂ ಪ್ರೋತ್ಸಾಹಿಸುವುದರಲ್ಲಿ ಬಹಳ ಉತ್ಸಾಹಿಗಳಾಗಿದ್ದರು. ಒಂದೆಡೆಯಲ್ಲಿ ಶಕ ಉಷವದಾತನು ಹಣವನ್ನೂ, ಹದಿನಾರು ಗ್ರಾಮಗಳನ್ನೂ, ಮೂರು ಲಕ್ಷ ಗೋವುಗಳನ್ನೂ ಬ್ರಾಹ್ಮಣರಿಗೆ ದಾನವಾಗಿ ಕೊಟ್ಟನು. ಮತ್ತೊಂದೆಡೆ ಅವನು ಬ್ರಾಹ್ಮಣರಿಗೆ ಎಂಟು ಜನ ಪತ್ನಿಯರನ್ನು ಕೊಟ್ಟನಲ್ಲದೆ ಸಾವಿರಾರು ಬ್ರಾಹ್ಮಣರಿಗೆ ವರ್ಷದಾದ್ಯಂತವೂ ಭೂರಿ ಭೋಜನವನ್ನೂ ಮಾಡಿಸಿದನು. ಮೂರನೆಯ ಶತವಾಹನ ಅರಸರು ಅನೇಕ ವೇದೋಕ್ತ ಯಜ್ಞಗಳನ್ನು ಮಾಡಿದರು. ತಾನು ಬ್ರಾಹ್ಮಣರ ಬೆಂಬಲಿಗನೆಂದು ಅಂದುಕೊಳ್ಳುವ ಗೌತಮೀಪುತ್ರ ಶತಕರ್ಣಿಯು ಸಾಂಪ್ರದಾಯಿಕ ಪುರಾಣೇತಿಹಾಸಗಳನ್ನು ಚೆನ್ನಾಗಿ ಕಲಿತಿದ್ದನು. ಚಾತುರ್ವರ್ಣಗಳ ಸಂಕರವನ್ನು ತಾನು ತಡೆಗಟ್ಟಿದೆನೆಂದು ಅವನು ಹೇಳಿಕೊಳ್ಳುತ್ತಿದ್ದನು. ಬ್ರಾಹ್ಮಣರಿಗೆ ನೀಡಿದ ಆಶ್ರಯ, ಪ್ರೋತ್ಸಾಹಗಳಿಗೂ, ವರ್ಣಾಶ್ರಮವನ್ನು ಪುನರುತ್ಥಾನಗೊಳಿಸುವ ಕಾರ್ಯಕ್ರಮಗಳಿಗೂ ಮತ್ತು ದಿನೇ ದಿನೇ ಹೆಚ್ಚುತ್ತಿದ್ದ ಆರ್ಯರ ಪ್ರಭಾವಕ್ಕೂ ಸಂಬಂಧವಿತ್ತೆಂದು ಇದರಿಂದ ಗೊತ್ತಾಗುತ್ತದೆ. ಹದಿನೇಳನೆಯ ಅರಸನಾದ ಹಾಲಾ ಎಂಬುವನು ಶಿವನ ಭಕ್ತನಾಗಿದ್ದನು. ಆ ಕಾಲದ ಶಿಲಾಶಾಸನಗಳು ಇಂದ್ರ, ವಿಷ್ಣು, ಶಿವ ಮತ್ತು ಸ್ಕಂದ ಇವರ ಪೂಜೆಗಳು ಆ ಕಾಲದಲ್ಲಿ ಆಚರಣೆಯಲ್ಲಿದ್ದುವೆಂದು ತೋರಿಸುತ್ತವೆ. ಹಾಲನ ಸಪ್ತಶತಿಯಲ್ಲಿ ಶಿವ, ಸ್ಕಂದ ಮತ್ತು ಗಣೇಶ ಇವುಗಳನ್ನು ಕುರಿತು ಪ್ರಸ್ತಾಪ ಮಾಡಲಾಗಿದೆ.

ಹೊರಗಿನವರು ಬರಲು ಆರಂಭಿಸಿದ ಮೇಲೆ ಉದ್ಯೋಗದ ಆಧಾರದ ಮೇಲೆ ಉಪಮತಗಳು ಬೆಳವಣಿಗೆ ಹೊಂದುವ ಅಭ್ಯಾಸವು ಆಚರಣೆಗೆ ಬರತೊಡಗಿತು. ಗೋಲಿಕರು ಎಂಬ ಕುರುಬರೂ, ಹಾಲಿಕರು ಎಂಬ ನೇಗಿಲು ಹಿಡಿದು ಉಳುವವರೂ, ಮರ್ಧಕ ಎಂಬ ಕ್ಷತ್ರಿಯರ ಒಂದು ಶಾಖೆಯೂ ಉಪಜಾತಿಗಳಾಗಿ ಹುಟ್ಟಿಕೊಂಡವೆಂದು ತಿಳಿದು ಬಂದಿದೆ. ಆದರೆ ಜಾತಿಯ ನಿಬಂಧನೆಗಳು ಅಷ್ಟೇನೂ ಹೆಚ್ಚು ಕಠಿಣವಾಗಿರಲಿಲ್ಲ. ಅಂತರ್ಜಾತೀಯ ವಿವಾಹಗಳೂ ಆಗಿಂದಾಗ್ಯೆ ನಡೆಯುತ್ತಿದ್ದವು. ಕೆಲವು ವೇಳೆ ಕ್ಷತ್ರಿಯರೂ ವೈಶ್ಯರ ಉದ್ಯೋಗವಾದ ವ್ಯಾಪಾರವನ್ನು ನಡೆಸುತ್ತಿದ್ದರು.

ಶಾತವಾಹನ ಅರಸರು ಮತಸಹಿಷ್ಣುತೆಯ ನೀತಿಯನ್ನು ಅವಲಂಬಿಸಿದರು. ಅವರ ರಾಜ್ಯದಲ್ಲಿ ಹಿಂದುಗಳು, ಜೈನರು ಮತ್ತು ಬೌದ್ಧರು ಎಂಬ ತಾರತಮ್ಯವಿಲ್ಲದೇ ಎಲ್ಲರಿಗೂ ಸಮಾನ ಸ್ವಾತಂತ್ರ್ಯವಿತ್ತು. ಆ ಅರಸರಲ್ಲಿ ಕೆಲವರು ಹಿಂದುಗಳಾಗಿದ್ದರು. ಮತ್ತೆ ಕೆಲವರು ಬೌದ್ಧರಾಗಿದ್ದರು, ಆದರೆ ಅವರಲ್ಲಿ ಯಾರೊಬ್ಬರು ಮತೀಯ ಪಕ್ಷಪಾತದ ಆಪಾದನೆಗೆ ಗುರಿಯಾಗಿರಲಿಲ್ಲ. ಹಿಂದೂ ದೇವಾಲಯಗಳೂ, ಬೌದ್ಧರ ಶಿಲಾಸ್ತಂಭಗಳೂ, ಅರಸರ ಉದಾರ ಆಶ್ರಯದಲ್ಲಿಯೇ ಕಟ್ಟಲ್ಪಡುತ್ತಿದ್ದವು. ಆದರೆ ಕಾಲಗತಿಯಿಂದ ಹಿಂದೂ ದೇವಾಲಯಗಳು ಶಿಥಿಲವಾಗಿ ಹೋದರೂ ಬೌದ್ಧ ಗುಹೆಗಳೂ, ಪವಿತ್ರ ವಿಹಾರಗಳೂ ಅದೃಷ್ಟವಶದಿಂದ ಅಭಿನ್ನವಾಗಿ ಉಳಿದಿವೆ.

ಶಾತವಾಹನರ ಪ್ರಾಬಲ್ಯವು ಕುಂದಿದ ನಂತರ ಸಾಮ್ರಾಜ್ಯದ ನಾನಾ ಭಾಗಗಳಲ್ಲಿ ಪಾಳೆಯಗಾರರು ಸ್ವತಂತ್ರರಾಗಿ ರಾಜ್ಯ ಆಡಳಿತವನ್ನು ನಡೆಸತೊಡಗಿದರು. ಈ ರೀತಿ ಮಹಾರಾಷ್ಟ್ರದಲ್ಲಿ ಅಭೀರರೂ, ಬಿರಾರ್ ಪ್ರದೇಶದಲ್ಲಿ ವಕಟಕರೂ, ಕೊಂಕಣದಲ್ಲಿ ಚೂತರೂ, ಪಶ್ಚಿಮದ ಕನ್ನಡಜಿಲ್ಲೆಯಲ್ಲಿ ಕದಂಬರೂ ರಾಜ್ಯಾಡಳಿತವನ್ನು ವಶಪಡಿಸಿಕೊಂಡರು. ಈತನ್ಮಧ್ಯೆ ಕಾಂಚಿಯಲ್ಲಿ ರಾಜ್ಯಾಡಳಿತವನ್ನು ನೆಲೆಗೊಳಿಸಿದ್ದ ಪಲ್ಲವರು ಶತವಾಹನರ ಗತಕಾಲದ ಸಾಮ್ರಾಜ್ಯಕ್ಕೆ ಆಗ್ನೇಯ ಭಾಗದಲ್ಲಿ ತಮ್ಮ ಅಧಿಕಾರವನ್ನು ಭದ್ರಪಡಿಸಿಕೊಂಡಿದ್ದರು. ಹೀಗೆ ನಾಲ್ಕು ಶತಮಾನಗಳಿಗೂ ಹೆಚ್ಚಾಗಿ ನಡೆದು ಬಂದ ದಕ್ಷಿಣದ ರಾಜಕೀಯ ಐಕ್ಯವು ಮುರಿದು ಬಿದ್ದಿತು. ಅದರ ಪರಿಣಾಮವಾಗಿ ಅನೇಕ ಸಣ್ಣ ಪುಟ್ಟ ಆಡಳಿತ ವರ್ಗಗಳು ಒಂದರೊಡನೊಂದು ಪದವಿ ಪ್ರತಿಷ್ಠೆಗಳಿಗಾಗಿ ಎಡೆಬಿಡದೆ ಹೋರಾಡುತ್ತಿದ್ದುವು. ಹೋರಾಟವು ಚಾಲುಕ್ಯರ ಪ್ರಾಬಲ್ಯದ ವರೆಗೆ ನಡೆಯುತ್ತಾ ಇತ್ತು ಎಂದು ಹೇಳಬಹುದು.

ಮೇಲೆ ನಿರೂಪಿಸಿದ ಚಾರಿತ್ರಿಕ ವಿಷಯಗಳಿಂದ ನಮ್ಮ ನಾಡಿಗೆ ಬಂದ ಬ್ರಾಹ್ಮಣರ ಪ್ರಥಮ ವಲಸೆ ಕ್ರಿ.ಪೂ.300ರಷ್ಟಕ್ಕೆ ಎಂದು ಅನುಮಾನಿಸಬಹುದು. ತಮಿಳು ಸಾಹಿತ್ಯಗಳಲ್ಲಿ ಉಲ್ಲೇಖಿತರಾದ ಮೌರ್ಯರು ಮಗಧದ ಮೌರ್ಯರೇ ವಿನಹ ಅವರ ಶಾಖೆಯವರೆಂದೆನಿಸಿಕೊಳ್ಳುವ ಕೊಂಕಣದ ಮೌರ್ಯರಾಗಿರಲಿಕ್ಕಿಲ್ಲ. ಕಾರಣವೇನೆಂದರೆ ಕೊಂಕಣದ ಮೌಲ್ಯರ ಕಾಲವು ಸಾಧಾರಣ ಕ್ರಿ.ಶ. ಆರನೇ ಶತಮಾನ. ಆದರೆ ಸಂಘಮ್ ಸಾಹಿತ್ಯದ ಕಾಲ ಕ್ರಿ.ಶ. ಮೂರನೇ ಶತಮಾನವೆಂದು ಸ್ವೀಕೃತವಾಗಿ ನಿರ್ಧರಿಸಲ್ಪಟ್ಟಿದೆ. ಮೌರ್ಯರ ಆಡಳಿತೆಗೆ ನಮ್ಮ ನಾಡು ನೇರವಾಗಿ ಸೇರದಿದ್ದರೂ ಅಂತೆಯೇ ಶಾತವಾಹನರ ರಾಜ್ಯಾಡಳಿತೆಯಲ್ಲಿ ತುಳುವವು ಒಂದು ಘಟಕವಾಗಿತ್ತೆಂದು ಹೇಳುವುದು ದುಸ್ತರವಾದರೂ, ಈ ಎರಡೂ ಸಂಸ್ಥಾಪಕರ ಪ್ರಭಾವವು ಗಣ್ಯವಾಗಿ ನಮ್ಮ ಕನ್ನಡ ಜಿಲ್ಲೆಗೆ ಬಿದ್ದರಬಹುದೆಂದೂ ತಿಳಕೊಳ್ಳಲು ಕಾರಣಗಳಿವೆ. ಈ ಪ್ರಾಂತ್ಯದಲ್ಲಿ ನೆಲೆನಿಂತ ಆರ್ಯರ ಅಧಿನಿವೇಶಗಳಿಗೆ ಅಧಿಕಾರಿಗಳಾಗಿದ್ದವರು ಯಾರು ಎಂಬ ಪ್ರಶ್ನೆಗೆ ವಿಮರ್ಶೆಯಿಂದ ಉತ್ತರಿಸಬೇಕಾಗುತ್ತದೆ. ಸುಮಾರು ಕ್ರಿ.ಪೂ.330ರಲ್ಲಿ ಚಂದ್ರಗುಪ್ತ ಮೌರ್ಯನ ರಾಜ್ಯಭಾರವನ್ನು ವ್ಯವಸ್ಥೆಗೊಳಿಸಿದ ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ವಿವರಿಸಿರುವ ಆಡಳಿತೆಯ ಕ್ರಮದಂತೆ ಸಣ್ಣ ನೆಲೆವೀಡುಗಳ ಅಧಿಕಾರಿಗಳು ಸ್ಥಾನಿಕರೆಂದು ಕರೆಯಲ್ಪಡುತ್ತಿದ್ದರೆಂದೂ ಅವರು ಧಾರ್ಮಿಕ ರಾಜಕೀಯಾಧಿಕಾರಿಗಳಾಗಿದ್ದರೆಂದೂ ಸ್ಪಷ್ಟವಿದೆ. ಅಲ್ಲದೆ ಈ ಅಧಿಕಾರಿಗಳು ಉಚ್ಚಕುಲದವರೂ ಸರ್ವಸಾಮಾನ್ಯರೂ ಆಗಿದ್ದು ಅಧಿಕಾರ ನಿರ್ವಹಿಸಲು ಸಮರ್ಥರಾದ ಜನರಾಗಿರಬೇಕೆಂದೂ ನಿರೂಪಿಸಿದೆ. ಆದ್ದರಿಂದ ತುಳುನಾಡಿಗೆ ಸ್ಥಾನಿಕರ ಪ್ರಥಮ ವಲಸೆಯು ಸುಮಾರು ಕ್ರಿ.ಪೂ.300ರಲ್ಲಿ ಆಗಿರಬಹುದೆಂದು ಅಂದಾಜುಮಾಡಬಹುದು. ಅದಲ್ಲದೆ ಈ ದಂಡಯಾತ್ರೆಯನ್ನನುಸರಿಸಿ ಪಶ್ಚಿಮ ಕರಾವಳಿಯನ್ನು ಸೇರಿಕೊಂಡ ಬ್ರಾಹ್ಮಣರೆಲ್ಲರೂ, ಋಗ್ವೇದಿಗಳೂ, ಅಶ್ವಲಾಯನ ಸೂತ್ರಾನುಸಾರಿಗಳೂ, ಭಾಷ್ಕಲ ಶಾಖೆಯುವರೂ ಎಂದು ತೀರ್ಮಾನಿಸಲು ಎಡೆ ಇದೆ. ಈ ಪಂಗಡದ ಬ್ರಾಹ್ಮಣರು ವೇದಾಧ್ಯಯನದ ಪ್ರಾರಂಭಿಕ ಕರ್ಮವಾದ ಉಪಾಕರ್ಮವನ್ನೂ, ಅಂದಿನ ಪದ್ಧತಿಯಂತೆ ಪರಂಪರೆಯಿಂದ ಈಗಲೂ ಸಿಂಹಮಾಸದ ಶ್ರವಣ ನಕ್ಷತ್ರದಂದು ಮಾಡುತ್ತಾರೆಂಬುದೂ, ಶಿವಾರಾಧನೆಗೆ ಲಿಂಗಪೂಜೆಯ ಕ್ರಮವನ್ನು (ವಿಗ್ರಹವನ್ನಲ್ಲ) ಅನುಸರಿಸುತ್ತಾರೆಂಬುದೂ ತಮ್ಮ ದೇವಾಲಯಗಳ ಪ್ರತಿಷ್ಠೆ ಪೂಜೆಗಳಿಗೆ ಋಗ್ವೇದ ಸೂಕ್ತ ಪ್ರಧಾನವಾದ ತಾಂತ್ರಿಕ ಕ್ರಮವನ್ನು ಅನುಸರಿಸುತ್ತಾರೆಂಬುದು, ನಾಗಾರಾಧನೆಗೆ ಪ್ರಾಶಸ್ತ್ಯ ಕೊಡುತ್ತಾರೆಂಬುದೂ ಭೂತಾರಾಧನೆಯನ್ನು ತಿರಸ್ಕರಿಸುವುದಿಲ್ಲವೆಂಬುದು ಮೇಲಿನ ತೀರ್ಮಾನವನ್ನು ಪುಷ್ಟೀಕರಿಸುತ್ತದೆ.

ಬ್ರಾಹ್ಮಣರಲ್ಲಿ ಮೊದಲಿಗರಾಗಿ ಸ್ಥಾನಿಕರ ಕುರಿತು ಕೆಲವು ಮಾತುಗಳನ್ನು ಹೇಳಲು ನಾನು ಬಯಸುತ್ತೇನೆ. ಚಿಕ್ಕಂದಿನಿಂದಲೂ ನನಗೆ ನಮ್ಮ ನಾಡಿನ ದೇವಸ್ಥಾನಗಳಲ್ಲಿ ಕೆಲಸ ಮಾಡುತ್ತಿರುವ 'ಸ್ಥಾನಿಕ'ರ ಕಡೆಗೆ ಒಂದು ರೀತಿಯ ಕುತೂಹಲವಿತ್ತು. ಇವರು ಸಮಾರಂಭಗಳಲ್ಲಿಯೂ, ಊಟ ಉಪಚಾರಗಳಲ್ಲಿಯೂ ಪ್ರವೇಶವನ್ನು ಪಡೆಯುತ್ತಿದ್ದರು. ಆದರೆ ಇವರು ಅಪಾಙ್ಕ್ತೇಯರಾಗಿದ್ದುದು (ಅಡ್ಡ ಪಙ್ತಿ) ನನ್ನ ಕುತೂಹಲವನ್ನು ಮತ್ತೂ ಕೆರಳಿಸುತ್ತಿತ್ತು. ಇವರು ಯಾರೆಂದು ಕೇಳುವ ನನ್ನ ಪ್ರಶ್ನೆಯು ತೃಪ್ತಿಕರವಾಗಿ ಉತ್ತರವನ್ನು ಪಡೆಯುತ್ತಿರಲಿಲ್ಲ. ಅಬ್ರಾಹ್ಮಣರೋ? ಅಲ್ಲ; ಯಾಕೆಂದರೆ ಅಬ್ರಾಹ್ಮಣರು ಊಟ ಸಮಾರಂಭಗಳಲ್ಲಿ ಬ್ರಾಹ್ಮಣರ ಅವಲೋಕನೆಗೆ ಸಿಗಬಾರದು. ಇವರು ಬ್ರಾಹ್ಮಣರೋ? ಅದೂ ಅಲ್ಲ; ಕಾರಣ, ಇತರ ಬ್ರಾಹ್ಮಣರ ಪಙ್ತಿಯಲ್ಲಿ ಇವರಿಗೆ ಸ್ಥಾನವಿರಲಿಲ್ಲ. ಎಲ್ಲೆಲ್ಲೂ ಇವರಿಗೆ ಅಡ್ಡ ಪಙ್ತಿ ಕೊಡಲ್ಪಡುತ್ತಿತ್ತು. (ಹೇಗೂ ಪಙ್ತಿ ಪ್ರಶ್ನೆ ಬ್ರಾಹ್ಮಣ್ಯಕ್ಕೆ ಮುಖ್ಯವಲ್ಲ) ಹಾಗಾದರೆ ಇವರು ಪತಿತ ಬ್ರಾಹ್ಮಣರೇ? ಸಂಪ್ರದಾಯವು ನಮ್ಮ ನಾಡಿನ ಸ್ಥಾನಿಕರನ್ನು ಪತಿತ ಬ್ರಾಹ್ಮಣರನ್ನಾಗಿ ತಿಳಿಯುತ್ತಿತ್ತು.

ನಾನು ಸಂಶೋಧನಾ ಕಾರ್ಯವನ್ನು ಎರಡು ಮೂರು ವರ್ಷಗಳ ಹಿಂದಕ್ಕೆ ಪ್ರಾರಂಭಿಸಿದಾಗ ಈ ಸ್ಥಾನಿಕ ವರ್ಗದ ವಿಷಯ ಹೆಚ್ಚು ತಿಳಿಯಬೇಕೆಂಬ ಆಶಾಂಕುರವು ಮೂಡಿತು. ತುಳುನಾಡಿನ ಸಮಾಜವನ್ನು ಪದರು ಪದರಾಗಿ ಅವಲೋಕಿಸುವಾಗ, ನಾನು ಕಂಡಂತೆ ನನಗೆ ಆಧಾರಗಳ ಮೂಲಕ ಮನವರಿಕೆಯಾದಂತೆ ಸ್ಥಾನಿಕರೆಂಬವರು ಒಂದು ವಿಶಿಷ್ಟವಾದ ಸ್ಥಾನವನ್ನು ಸಮಾಜದಲ್ಲಿ ಪಡೆದ ಬ್ರಾಹ್ಮಣ ವರ್ಗವೆಂದೂ, ಈ ಬ್ರಾಹ್ಮಣ್ಯ ವರ್ಗವು ಬ್ರಾಹ್ಮಣ್ಯವನ್ನು ತುಳುನಾಡಿನಲ್ಲಿ ಪ್ರಥಮವಾಗಿ ಆಚಾರ ಮಾಡಿದ್ದಾಗಿಯೂ ಕಂಡು ಬಂತು. ಸ್ಥಾನಿಕರು ತುಳುನಾಡಿನ ಬ್ರಾಹ್ಮಣರಲ್ಲಿ ಮೊದಲಿಗರು. ಅವರು ಪ್ರಾಚೀನರು. ಅವರ ಹತೋಟಿಯಲ್ಲಿ ನಮ್ಮ ನಾಡಿನ ಪ್ರಾಮುಖ್ಯವಾದ ದೇವಾಲಯಗಳಿದ್ದವು. ಅವರು ಒಂದು ಕಾಲದಲ್ಲಿ (ಸಾಮಾನ್ಯ ಕ್ರಿ.ಶ.15ನೆಯ ಶತಮಾನದ ವರೆಗೆ) ಉಚ್ಚ್ರಾಯಸ್ಥಿತಿಯಲ್ಲಿದ್ದರು. ಕಾಲ ಉರುಳಿದಂತೆ ಬೇರೆ ಬೇರೆ ಬ್ರಾಹ್ಮಣರ ಪಂಗಡಗಳು ನಮ್ಮ ನಾಡಿಗೆ ಬಂದು ನೆಲೆಸಿಕೊಂಡು ಅವರ ಸಂಖ್ಯೆ ಹೆಚ್ಚಾದಾಗ, ಧಾರ್ಮಿಕ ಭಾವನೆಯು ವಿಭಿನ್ನವಾದಾಗ, ಅಧಿಕಾರ ಹಸ್ತಾಂತರವಾದಾಗ ಈ ಮೂಲ ಬ್ರಾಹ್ಮಣರಾದ ಸ್ಥಾನಿಕರು ಪತನಹೊಂದಿದರು - ಎಂಬೀ ವಿಷಯಗಳನ್ನು ಕಂಡುಕೊಂಡೆನು. ಅವರ ಉದ್ಧಾರವನ್ನು ನಾನೀಗ ಮಾಡಲು ಹೊರಟವನಲ್ಲ. ನನ್ನಿಂದ ಸಾಧ್ಯವೂ ಇಲ್ಲ. ಈ ಕೆಲಸದ ಅವಶ್ಯಕತೆಯೂ ಇಲ್ಲ. ಆದರೆ ಸತ್ಯ ಸಂಗತಿಗಳನ್ನೂ, ಚಾರಿತ್ರಿಕ ವಿಷಯಗಳನ್ನು ಓದುಗರ ಮುಂದಿಡುವುದು ನನ್ನ ಕೆಲಸ. ನಮ್ಮ ನಾಡಿನ ಅತ್ಯಂತ ಪ್ರಧಾನವಾದ ಸಾಮಾಜಿಕ ಘಟಕಗಳಲ್ಲಿ ಒಂದಾದ ಬ್ರಾಹ್ಮಣರ ಮೂಲವನ್ನು ಈ ಸ್ಥಾನಿಕರಲ್ಲಿ ಕಂಡುಕೊಳ್ಳಬೇಕಾದುದು ನಮ್ಮ ಕರ್ತವ್ಯವೆಂಬುದನ್ನು ಜನತೆಗೆ ತಿಳಿಯಪಡಿಸುವುದೂ, ನಮ್ಮ ನಾಡಿನ ಬ್ರಾಹ್ಮಣರು ಇದನ್ನು ಸರಿಯಾಗಿ ಮನವರಿಕೆ ಮಾಡಿಕೊಳ್ಳಬೇಕೆಂಬುದಾಗಿಯೂ ನನ್ನ ಆಶಯವಾಗಿದೆ.

(ಪಾದೂರು ಗುರುರಾಜ ಭಟ್ ತನ್ನ ತುಳುನಾಡು ಪುಸ್ತಕದಲ್ಲಿ ಬರೆದ ಮೊದಲ ಮಾತಿದು. ಈ ಪುಸ್ತಕ 2ನೇ ಮುದ್ರಣಗೊಂಡಿದೆ. ಪಾದೂರು ಗುರುರಾಜ ಭಟ್ ಮೆಮೋರಿಯಲ್ ಟ್ರಸ್ಟ್ (ರಿ.), ಎಸ್.ಎಮ್.ಎಸ್. ಕಾಲೇಜು ಬಿಲ್ಡಿಂಗ್ ಕಾಂಪ್ಲೆಕ್ಸ್, 1ನೇ ಮಹಡಿ, ಉಡುಪಿ-576101. ನಮ್ಮ ಸಮಾಜ ಬಾಂಧವರು ಈ ಪುಸ್ತಕವನ್ನು ತೆಗೆದುಕೊಂಡು ಓದಬೇಕೆಂದು ವಿನಂತಿ.)

ರಾಮಾ ಅಟೋಮೊಬೈಲ್ಸ್
ಮಾರುತಿ ವಾಹನ ತಜ್ಞರು
ಮಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006.
ಫೋನ್ : 2454355, ಮೊಬೈಲ್ : 94485 45702

ಪ್ರೊ : ಯು. ಸಂತೋಷ ಕುಮಾರ್, ಉಜ್ಜೋಡಿ


## ಮಾಂಗಲ್ಯಂ ತಂತುನಾನೇನ ....

ಬೆಂಗಳೂರಿನಲ್ಲಿ ವಾಸ್ತವ್ಯದಲ್ಲಿರುವ ಶ್ರೀಮತಿ ನಾಗರತ್ನ ಮತ್ತು ಬೈಕಾಡಿ ಸೂರ್ಯನಾರಾಯಣ ರಾವ್ ಇವರ ಪುತ್ರ **ವಿನೋದ್‌ಕುಮಾರ್** ಹಾಗೂ ಮಹಾರಾಷ್ಟ್ರದ ತುಳಜಾಪುರದಲ್ಲಿ ವಾಸ್ತವ್ಯದಲ್ಲಿರುವ ಶ್ರೀಮತಿ ಸುಮಿತ್ರ ಮತ್ತು ಶ್ರೀ ಉಚ್ಚಿಲ ಸುಬ್ರಾಯ ಶ್ಯಾನುಭೋಗರ ಪುತ್ರಿ **ಶ್ರೀಲತಾ** ಇವರ ವಿವಾಹವು ತಾ.05-11-2009ರಂದು ಉಡುಪಿ ರಥಬೀದಿಯಲ್ಲಿರುವ ಶ್ರೀ ವಿದ್ಯಾಮಾನ್ಯ ಸಭಾಭವನದಲ್ಲಿ ನೆರವೇರಿತು.

★★★★

ಮುಕ್ಕ ವಿಶ್ವನಾಥ ರಾಯರ ಪುತ್ರ **ವಲ್ಲೀಶ** ಹಾಗೂ ಬೆಳ್ಮಣ್ಣು ಬೈಲುಮನೆ ಸುಬ್ರಹ್ಮಣ್ಯ ರಾಯರ ಪುತ್ರಿ **ಸ್ವಪ್ನಾ** ಇವರ ವಿವಾಹವು ತಾ.05-11-2009 ರಂದು ಉಡುಪಿ ಕುಂಜಿಬೆಟ್ಟು ಶ್ರೀಶಾರದಾ ಮಂಟಪದಲ್ಲಿ ನೆರವೇರಿತು.

★★★★

ಶ್ರೀಮತಿ ಮತ್ತು ಶ್ರೀ ಅಲೆವೂರು ರಾಮಕೃಷ್ಣ ರಾಯರ ಪುತ್ರ **ಸುಧೀರ್** ಹಾಗೂ ಶ್ರೀಮತಿ ಮತ್ತು ಶ್ರೀ ಎಲ್ಲೂರು ಟಿ. ರವಿರಾಜ್‌ರಾವ್‌ರವರ ಪುತ್ರಿ **ವಿನುತ** ಇವರ ವಿವಾಹವು ತಾ.02-11-2009 ರಂದು ಉಡುಪಿ ಕುಂಜಿಬೆಟ್ಟು ಶ್ರೀಶಾರದಾ ಮಂಟಪದಲ್ಲಿ ನೆರವೇರಿತು.

★★★★

ಉಡುಪಿ ಪರ್ಕಳದಲ್ಲಿರುವ ಶ್ರೀ ಕುರಯ ಜಯರಾಮ ಶಾಸ್ತ್ರಿಯವರ ಪುತ್ರ **ರಾಮಮೂರ್ತಿ** ಹಾಗೂ ಕಾಸರಗೋಡಿನ ನೆಲ್ಲಿಕುಂಜೆಯಲ್ಲಿರುವ ಶ್ರೀ ಸಿ.ಎಚ್.ರಮಾಮಾಧವರ ಪುತ್ರಿ **ಸ್ವಾತಿಕಾ** ಇವರ ವಿವಾಹವು ತಾ.28-10-2009 ರಂದು ಶ್ರೀ ಸುಬ್ರಹ್ಮಣ್ಯ ಸಭಾಸದನ ಬಿಜೈ, ಮಂಗಳೂರು ಇಲ್ಲಿ ನೆರವೇರಿತು.

★★★★

ಪಿ. ವಿ. ಮಂಜುನಾಥ ಛಾತ್ರರವರ ಪುತ್ರ **ಮಹೇಶ್‌ಕುಮಾರ್** ಹಾಗೂ ಮಾರ್ಪಳ್ಳಿ ಶಂಕರ ರಾಯರ ಪುತ್ರಿ **ಪುಷ್ಪಲತಾ** ಇವರ ವಿವಾಹವು ತಾ.25-10-2009ರಂದು ಮುಲ್ಕಿ ಪುನರೂರು ಶ್ರೀ ವಿಶ್ವನಾಥ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ನೆರವೇರಿತು.

★★★★

ಶ್ರೀಮತಿ ಪಲ್ಲವಿ ಮತ್ತು ಡಾ। ವಿಲಾಸ್ ಜೋಷಿಯವರ ಪುತ್ರ **ಡಾ। ನಿಖಿಲ್** ಹಾಗೂ ಮಂಗಳೂರಿನ ಶ್ರೀಮತಿ ಸುಮನ್‌ಕೃಷ್ಣ ಡಾ। ಎ. ಪಿ.ಕೃಷ್ಣ ಇವರ ಪುತ್ರಿ **ಅಲಕಾ** ಇವರ ವಿವಾಹವು ತಾ.21-10-2009ರಂದು ಮಂಗಳೂರಿನ ಸಂಘನಿಕೇತನದಲ್ಲಿ ನೆರವೇರಿತು.

★★★★

ಪಾದೆಬೆಟ್ಟು ಮರಿಯಪ್ಪಯ್ಯನವರ ಪುತ್ರ **ವಿಷ್ಣುಪ್ರಸಾದ್** ಹಾಗೂ ಕಾಸರಗೋಡಿನ ಮರ್ದಂಬೈಲು ಶಂಕರನಾರಾಯಣರ ಪುತ್ರಿ **ಸಹಿತಾ** ಇವರ ವಿವಾಹವು ತಾ.25-10-2009ರಂದು ಮಂಗಳೂರು ಶಕ್ತಿನಗರ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಕಲ್ಯಾಣಮಂಟಪದಲ್ಲಿ ನೆರವೇರಿತು.

## ವೃಶ್ಚಿಕ ಮಾಸ ವಿಶೇಷ ದಿನಗಳು

| | |
|---|---|
| 16-11-2009 | **ವೃಶ್ಚಿಕ ಸಂಕ್ರಮಣ ಅಮಾವಾಸ್ಯ** |
| 19-11-2009 | **ಅನುರಾಧಾ ನಕ್ಷತ್ರಾರಂಭ** |
| 23-11-2009 | **ಶ್ರೀ ಸುಬ್ರಹ್ಮಣ್ಯ ಷಷ್ಠಿ** |
| 28-11-2009 | **ಸರ್ವೈಕಾದಶೀ** |
| 29-11-2009 | **ಪ್ರದೋಷಃ, ಮುಕ್ಕೋಟಿ ದ್ವಾದಶಿ** |
| 02-12-2009 | **ಹುಣ್ಣಿಮೆ-ಜ್ಯೇಷ್ಠಾ ನಕ್ಷತ್ರಾರಂಭ** |
| 05-12-2009 | **ಸಂಕಷ್ಟ ಚತುರ್ಥಿ** ಚಂದ್ರೋದಯ ರಾತ್ರಿ ಗಂ.9.18ಕ್ಕೆ |
| 12-12-2009 | **ಸರ್ವೈಕಾದಶೀ** |
| 13-12-2009 | **ಪ್ರದೋಷಃ** |
| 15-12-2009 | **ಧನು ಸಂಕ್ರಮಣ ಮೂಲಾ ನಕ್ಷತ್ರಾರಂಭ** |

## ಅಭಿನಂದನೆ

### ಕು। ಛಾಯಾ ಭಾಗವತ್



ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿಯವರು ಜೂನ್ 2009ರಲ್ಲಿ ನಡೆಸಿದ ಭರತನಾಟ್ಯ ಸೀನಿಯರ್ ವಿಭಾಗದಲ್ಲಿ ಕು। ಛಾಯಾ ಭಾಗವತ್ ಇವರು ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾಗಿರುತ್ತಾರೆ. ಉಡುಪಿ ವಿದ್ಯೋದಯ ಪದವಿ ಪೂರ್ವ ಕಾಲೇಜಿನ 2ನೇ ವರ್ಷದ ವಿಜ್ಞಾನ ವಿದ್ಯಾರ್ಥಿಯಾದ ಇವಳು ರಾಧಾಕೃಷ್ಣ ನೃತ್ಯ ನಿಕೇತನದ ವಿದ್ವಾನ್ ವೀಣಾ ಎಂ. ಸಾಮಗ ಇವರ ಶಿಷ್ಯೆ ಹಾಗೂ ಬಾರಕೂರಿನ ಪ್ರಕಾಶ್ ಭಾಗವತ್ ಮತ್ತು ಜಯಲಕ್ಷ್ಮೀ ಇವರ ದ್ವಿತೀಯ ಪುತ್ರಿಯಾಗಿರುತ್ತಾಳೆ. ಈಕೆಯ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

### ಕು। ಅಂಕಿತ ಸಿ. ಎಸ್. ರಾವ್



ಚಿಕ್ಕಮಗಳೂರು ಜಿಲ್ಲೆಯ ಬಾಳೆಹೊನ್ನೂರಿನ ನವೋದಯ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ 9ನೇ ತರಗತಿ ವಿದ್ಯಾರ್ಥಿನಿ ಕು। ಶರಧಿ ಎಲ್.ರಾವ್ ನವೋದಯ ವಿದ್ಯಾಲಯ ಸಮಿತಿಯವರು ನಡೆಸಿದ ರಾಷ್ಟ್ರಮಟ್ಟದ ವಾಲಿಬಾಲ್ ಪಂದ್ಯಾವಳಿಯಲ್ಲಿ ಆಯ್ಕೆಯಾಗಿರುತ್ತಾಳೆ. (Best Allrounder). ಈಕೆ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಾದ ನೃತ್ಯ, ಚಿತ್ರಕಲೆ ಮತ್ತು ರಸಪ್ರಶ್ನೆಗಳಲ್ಲಿ ಒಂದನೇ ತರಗತಿಯಿಂದಲೂ ಅನೇಕ ಬಹುಮಾನ ಪಡೆದಿರುತ್ತಾಳೆ. ಅಂತರಾಷ್ಟ್ರೀಯ ಮಟ್ಟದ ವಿಜ್ಞಾನ ಮತ್ತು ಗಣಿತ ಪ್ರತಿಭಾ ಪರೀಕ್ಷೆಯಲ್ಲಿ ರಾಜ್ಯ ಮಟ್ಟದಲ್ಲಿ 10ನೇ ಬಹುಮಾನ ಪಡೆದಿದ್ದಾಳೆ. 2007ರಿಂದ ವಿಭಾಗೀಯ ಮಟ್ಟದಲ್ಲಿ ಬಹುಮಾನ ಪಡೆದಿದ್ದರೆ ಈ ಬಾರಿ ಅವಳ ರಾಷ್ಟ್ರಮಟ್ಟದ ಸಾಧನೆಗೆ ಅಭಿನಂದನೆಗಳು. ಈಕೆ ಹೆಮ್ಮಾಡಿಯ ಲಕ್ಷ್ಮೀನಾರಾಯಣ ಹೆಬ್ಬಾರ್ ಮತ್ತು ಇಂದ್ರಾಣಿ ದಂಪತಿಗಳ ಪುತ್ರಿ.

### ಕು। ಸ್ವೀಕೃತಿ ಕೆ.



2008-09ನೇ ಸಾಲಿನ ಕರ್ನಾಟಕ ರಾಜ್ಯ ಸರಕಾರ ನಡೆಸಿದ ಕರ್ನಾಟಕ ಶಾಸ್ತ್ರೀಯ ಸಂಗೀತ ಜೂನಿಯರ್ ಪರೀಕ್ಷೆಯಲ್ಲಿ ಶೇ.88 ರಷ್ಟು ಅಂಕ ಗಳಿಸಿ ತೇರ್ಗಡೆಯಾದ ಕು। ಸ್ವೀಕೃತಿ ಕೆ. ಈಕೆ ಚೊಕ್ಕಾಡಿ ಶ್ರೀ ಸತ್ಯ ಸಾಯಿ ಕೇಂದ್ರದ ಒಂಭತ್ತನೆಯ ತರಗತಿಯ ವಿದ್ಯಾರ್ಥಿನಿ. ಸಂಗೀತ ಅಧ್ಯಾಪಕರಾದ ಕಾಂಚನ ಈಶ್ವರ ಭಟ್ ಅವರ ಶಿಷ್ಯೆ. ಅಡೂರಿನ ಗಿರಿಧರ ರಾವ್ ಮತ್ತು ಸುಮಾಗಿರಿಧರ್ ರಾವ್ ದಂಪತಿಯ ಪುತ್ರಿ. ಬೈಂದೂರು ಪಡುವರಿಯ ಡಿ. ನಾಗರಾಜ ರಾವ್‌ರವರ ಮೊಮ್ಮಗಳು.

## ಶುಭಜನನ

ಬೆಂಗಳೂರಿನಲ್ಲಿ ವಾಸವಾಗಿರುವ ಬೈಲಕೆರೆ ಗೋವಿಂದ ರಾವ್ ಮತ್ತು ಅರುಂಧತಿ ರಾವ್‌ರವರ ಪುತ್ರ ಅನಿಲ್‌ರಾವ್ ಹಾಗೂ ಸವಿತಾ ಅನಿಲ್‌ರಾವ್‌ರವರಿಗೆ ತಾ.30-10-2009ರಂದು ಗಂಡು ಮಗುವಿನ ಜನನ.

**ದೂರವಾಣಿ ಸಂಖ್ಯೆ ಬದಲಾವಣೆ**

**ದೂರವಾಣಿ ಸಂಖ್ಯೆ 4290305**

**ಶ್ರೀ ವೈ. ಮುರಲೀಧರ ರಾವ್**

**"ಸುಧಾಮ", ಕುಂಜಿಬೆಟ್ಟು, ಉಡುಪಿ.**

## ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ

**ಡಾ। ವೈ. ಸುದರ್ಶನ ರಾವ್**

**ಪ್ರಶ್ನೆ : ಪೈಲ್ಸ್ ಅಥವಾ ಮೂಲವ್ಯಾಧಿ ಎಂಬ ಖಾಯಿಲೆ ಹೇಗೆ ಬರುತ್ತದೆ? ಇದಕ್ಕೆ ಏನು ಪರಿಹಾರ?**

**ಉತ್ತರ :** ಗುದದ್ವಾರಕ್ಕೆ ಸಂಬಂಧಿಸಿದ ರೋಗ ಸಂಕುಲವನ್ನು ಮೂಲವ್ಯಾಧಿ ಎಂದು ಕರೆಯುವುದು ರೂಢಿ. ಈ ರೋಗ ಸಂಕುಲದಲ್ಲಿ ಪೈಲ್ಸ್ (haemorrhoids) ಎಂದು ಕರೆಯಲಾಗುತ್ತಿರುವ ಖಾಯಿಲೆಯೂ ಒಂದು. ಇದು ಸುಮಾರು 25%ದಷ್ಟು ಜನರನ್ನು (ಮಕ್ಕಳನ್ನು ಹೊರತುಪಡಿಸಿ) ಬಾಧಿಸುತ್ತಿದೆ ಎಂದು ಅಂದಾಜು ಮಾಡಲಾಗಿದೆ.

**ಈ ಕಾಯಿಲೆಯ ಚಿಹ್ನೆಗಳು :**

- ಮಲ ವಿಸರ್ಜನೆಯ ಸಮಯದಲ್ಲಿ ರಕ್ತಸ್ರಾವವಾಗುವುದು ಈ ಖಾಯಿಲೆಯ ಮುಖ್ಯ ಚಿಹ್ನೆ. ರಕ್ತಸ್ರಾವವಿದ್ದರೂ ನೋವಿರುವುದಿಲ್ಲ. ಕೆಲವೊಮ್ಮೆ ಹನಿಹನಿಯಾಗಿ ರಕ್ತಬಿದ್ದರೆ, ಕೆಲವೊಮ್ಮೆ ಪಿಚಕಾರಿಯಿಂದ ಚಿಮ್ಮಿಸಿದಂತೆ ರಕ್ತಸ್ರಾವವಾಗಬಹುದು. ಆರಂಭಿಕ ಹಂತದಲ್ಲಿ (grade-I) ಇದೊಂದೇ ಚಿಹ್ನೆ ಇರಬಹುದು.
- ಮಲದ್ವಾರದಲ್ಲಿ ಗುಳ್ಳೆ ಈ ಖಾಯಿಲೆಯ ಇನ್ನೊಂದು ಚಿಹ್ನೆ. ಈ ಗುಳ್ಳೆಯು ಒತ್ತಿನೋಡಲು ಮೆತ್ತಗೂ, ನೋವಿಲ್ಲದೆಯೂ, ಗಂಟುಗಂಟಿನಂತೆಯೂ, ಮಲದ್ವಾರದ ಸುತ್ತಲೂ ಇರುತ್ತದೆ. ಮೊದಮೊದಲು (grade-II ಹಂತ) ಮಲವಿಸರ್ಜನೆಗೆ ಬಿಕ್ಕುವಾಗ ಹೊರಬಂದು, ತನ್ನಿಂತಾನಾಗೆ ಒಳಗೆ ಹೋಗುವುದು. ಹೀಗೆ ಹೊರಬಂದ ಗುಳ್ಳೆಯನ್ನು ನೂಕಿದರೆ ಮಾತ್ರ ಒಳಹೋಗುವುದಾದರೆ ಅದು ಮುಂದಿನ ಹಂತ (grade-III). ನೂಕಿದರೂ ಒಳಹೋಗದೆ ಮಲದ್ವಾರದಲ್ಲೇ ಹೊರಗೇ ಇರುವುದಾದರೆ ಅದು ನಾಲ್ಕನೇ ಹಂತ (grade-IV). ಈ ಹಂತದಲ್ಲಿ ಕೆಲವೊಮ್ಮೆ ಗುಳ್ಳೆಯೊಳಗೆ ರಕ್ತಹೆಪ್ಪುಗಟ್ಟಿಕೊಂಡರೆ ವಿಪರೀತ ನೋವಿರುತ್ತದೆ.
- ಕೆಲವೊಮ್ಮೆ ಯಾವುದೇ ಆರಂಭಿಕ ಚಿಹ್ನೆಗಳಿರದ ಪೈಲ್ಸ್ ಗುಳ್ಳೆಯು ಬೆಳಗುಮುಂಜಾನೆಯಾಗುವುದ ರೊಳಗೆದ್ದು ಅದರೊಳಗೆ ರಕ್ತಹೆಪ್ಪುಗಟ್ಟಿ ವಿಪರೀತ ನೋವಿನೊಂದಿಗೆ ಬರುವವರಿದ್ದಾರೆ. ಇದಕ್ಕೆ ಮಲವಿಸರ್ಜನೆಗೆ ಅತಿಯಾಗಿ ತಿಣುಕಿದ್ದೇ ಕಾರಣವಾಗಿರುತ್ತದೆ.

ಮಲವಿಸರ್ಜನೆ ಸಲೀಸಾಗಿ ಆಗದೆ ಅದಕ್ಕಾಗಿ ತಿಣುಕುವುದು ಪೈಲ್ಸ್ ಕಾಯಿಲೆಯ ಮೂಲ ಹೇತು. ಮಲವಿಸರ್ಜನೆ ಸರಿಯಾಗಿ ಆಗದಿರಲು ಕಾರಣಗಳೇನೆಂದರೆ :

- ಆಹಾರದಲ್ಲಿ ನಾರು ಪದಾರ್ಥ ಕಡಿಮೆಯಾಗಿರುವುದು
- ಅತಿಯಾದ ಮಾಂಸಾಹಾರ, ಮಸಾಲೆ ಪದಾರ್ಥ ಸೇವನೆ
- ಧೂಮಪಾನ, ಮದ್ಯಪಾನ
- ನಿದ್ದೆಗೆಡುವುದು, ಕ್ರಮಬದ್ಧವಲ್ಲದ ದಿನಚರಿ ಇತ್ಯಾದಿಗಳು

ಇದಲ್ಲದೇ ಗರ್ಭಿಣಿಯರಾದಾಗ ಪೈಲ್ಸ್ ಖಾಯಿಲೆ ಮೊದಲ ಬಾರಿಗೆ ಆರಂಭವಾಗುವುದಿದೆ. ಯಾವುತ್ತೂ ಕುಳಿತುಕೊಂಡೆ ಇರುವ ಕೆಲಸ ಮಾಡುವವರಿಗೆ (ಉದಾ : ಡ್ರೈವರ್) ಈ ಖಾಯಿಲೆ ಬರುವ ಸಾಧ್ಯತೆ ಹೆಚ್ಚು. ಕೆಲವೊಂದು ಔಷಧಿಗಳನ್ನು ಸತತವಾಗಿ ಸೇವಿಸುವುದರಿಂದಲೂ, ಲಿವರ್‌ನ ತೊಂದರೆ ಇರುವವರಿಗೂ ಈ ಖಾಯಿಲೆ ಬರಬಹುದು.

**ಪೈಲ್ಸ್‌ನಿಂದಾಗುವ ತೊಂದರೆಗಳು :**

- ಪ್ರತಿನಿತ್ಯ ರಕ್ತಸ್ರಾವವಾಗುವುದರಿಂದ ನಿಧಾನವಾಗಿ ರಕ್ತಹೀನತೆಯಾಗುವುದು
- ಮಲವಿಸರ್ಜನೆಗೆ ಅಡೆತಡೆಯುಂಟಾಗಬಹುದು
- ತುರಿಕೆ, ಗುದದ್ವಾರದಲ್ಲಿ ನೋವು, ಹಿಂಸೆ.


**ಚಿಕಿತ್ಸೆ :**

ಆರಂಭದ ಹಂತದಲ್ಲಿ (grade-I) ಮಲವಿಸರ್ಜನೆಯು ಸಲೀಸಾಗಿ ಆಗುವಂತೆ ಮಾಡುವ ಔಷಧಿ (laxative)ಗಳು, ಅಲ್ಲಿಗೆ ಹಚ್ಚುವ ಮುಲಾಮುಗಳು, ಬಾಯಿಯ ಮುಖಾಂತರ ತೆಗೆದುಕೊಳ್ಳುವ ಮಾತ್ರೆಗಳಿಂದ ಗುಣಪಡಿಸಿಕೊಳ್ಳಬಹುದು. ಎರಡನೆ ಹಂತದ ಖಾಯಿಲೆಯನ್ನು ಸ್ಕ್ಲೀರೋತೆರಪಿ ಹಾಗೂ ಬ್ಯಾಂಡಿಂಗ್‌ಗಳೆಂಬ ಎರಡು ಸುಲಭ ಶಸ್ತ್ರಚಿಕಿತ್ಸಾ ವಿಧಾನಗಳಿಂದ ಗುಣಪಡಿಸಿಕೊಳ್ಳಬಹುದು. ನಂತರದ ಹಂತಗಳಿಗೆ ಶಸ್ತ್ರಚಿಕಿತ್ಸೆಯೇ ಉತ್ತಮ ಉಪಶಮನ ನೀಡಬಲ್ಲುದು. Minimally invasive haemorrhoidal surgery ಎಂಬ ಹೊಸ ಶಸ್ತ್ರಚಿಕಿತ್ಸಾ ವಿಧಾನ ಈಗ ಹೆಚ್ಚು ಪ್ರಸಿದ್ಧವಾಗುತ್ತಿದೆ.

**ಪೈಲ್ಸ್ ಬಾಧೆಯನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವುದೂ ಹಾಗೂ ಬಾರದಂತೆ ತಡೆಗಟ್ಟುವುದೂ ಹೇಗೆ? :**

- ಆಹಾರದಲ್ಲಿ ಸೊಪ್ಪು ಹಾಗೂ ಹಸಿರು ತರಕಾರಿಯನ್ನು ಪ್ರತಿದಿನವೂ ಹೆಚ್ಚಿನ ಪ್ರಮಾಣದಲ್ಲಿ ಬಳಸಿ.
- ದ್ರವ ಪದಾರ್ಥಗಳನ್ನು ಸಾಕಷ್ಟು ಸೇವಿಸಿ.
- ದಿನಕ್ಕೆರಡು ಬಾರಿ ಮಲ ವಿಸರ್ಜನೆಮಾಡುವುದು ಒಂದು ಉತ್ತಮ ಅಭ್ಯಾಸ
- ಮಲವಿಸರ್ಜನೆಗೆ ತಿಣುಕಬಾರದು. ತಿಣುಕುವಂತಾದರೆ ನೀವು ಸಾಕಷ್ಟು ಸೊಪ್ಪು ತರಕಾರಿ ತಿನ್ನುತ್ತಿಲ್ಲವೆಂದರ್ಥ. ಹಾಗಿದ್ದೂ ಮಲವಿಸರ್ಜನೆ ಕಷ್ಟವಾದರೆ ವೈದ್ಯರನ್ನು ಭೇಟಿಯಾಗಿ.
- ಆರಂಭಿಕ ಹಂತದಲ್ಲಿ ಪರಿಣಾಮಕಾರಿ ಔಷಧಗಳಿರುವುದರಿಂದ ಆದಷ್ಟು ಬೇಗನೆ ತಜ್ಞ ವೈದ್ಯ (surgeon)ರ ಸಲಹೆ ಪಡೆಯಿರಿ.

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 98451 36322**



## ವೇದಾಂತ ಭಾರತೀ ಆಯೋಜಿಸಿದ ಸೌಂದರ್ಯಲಹರೀ ಕೋಟ್ಯರ್ಚನೆಯ ಸೌಂದರ್ಯಲಹರೀ ಸಪ್ತಾಹ

ದಿನಾಂಕ 24-11-2009ರಿಂದ 30-11-2009ರ ವರೆಗೆ
ಸ್ಥಳ : ಶ್ರೀ ಶಾರದಾ ದೇವಸ್ಥಾನ ಕುಂಜಿಬೆಟ್ಟು, ಉಡುಪಿ-2.

: ಪ್ರಾಯೋಜಕರು :
ಜ್ಞಾನಭಾರತೀ (ರಿ.), ಉಡುಪಿ ; ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಉಡುಪಿ ಹವ್ಯಕ ಸಭಾ (ರಿ.), ಉಡುಪಿ ; ಮಹಿಳಾ ಸಂಘಟನೆಗಳು, ಉಡುಪಿ

**ತಾ.24-11-2009 ಮಂಗಳವಾರ-ಉದ್ಘಾಟನೆ**
ಶಕ್ತ್ಯುಪಾಸನೆ : ಮೊದಲ ಶ್ಲೋಕ (ಶಿವಃ ಶಕ್ತ್ಯಾಯುಕ್ತಃ) ಜಪಿಸಿ ಒಂದು ಬಾರಿ ಸೌಂದರ್ಯಲಹರೀ ಪಾರಾಯಣ

**ತಾ.25-11-2009 ಬುಧವಾರ**
ಜ್ಞಾನದಾಯಿನೀ ಆರಾಧನೆ : 43ನೇ ಶ್ಲೋಕವನ್ನು ಓದಿ (ಧುನೋತು ಧ್ವಾಂತರಿನಃ) ಸೌಂದರ್ಯ ಲಹರೀ ಪಾರಾಯಣ ಒಂದಾವರ್ತಿ ಮಾಡುವುದು.

**ತಾ.26-11-2009 ಗುರುವಾರ**
ಕೃಪಾದೃಷ್ಟಿಯಾಚನೆ : 57ನೇ ಶ್ಲೋಕವನ್ನು (ದೃಶಾದ್ರಾಘೀಯಸ್ಯ) ಓದಿ ಒಂದಾವರ್ತಿ ಸೌಂದರ್ಯಲಹರೀ ಪಾರಾಯಣ ಮಾಡುವುದು.

**ತಾ.27-11-2009 ಶುಕ್ರವಾರ**
ಪಾವನದಾಯಿನೀ ಪೂಜೆ : 54ನೇ ಶ್ಲೋಕವನ್ನು (ಪವಿತ್ರೀಕರ್ತುಂನಃ) ಓದಿ, ಸೌಂದರ್ಯ ಲಹರೀ ಒಂದಾವರ್ತಿ ಪಾರಾಯಣ ಮಾಡುವುದು.

**ತಾ.28-11-2009 ಶನಿವಾರ**
ಅಮೃತವರ್ಷಿಣೀ ಧ್ಯಾನ : 72ನೇ ಶ್ಲೋಕವನ್ನು (ಸಮರಿ ದೇವಿ ಸ್ಕಂದ) ಓದಿ, ಸೌಂದರ್ಯಲಹರೀ ಪಾರಾಯಣ ಒಂದಾವರ್ತಿ ಮಾಡುವುದು. ಬಳಿಕ ಶ್ರೀ ಶಂಕರನಾಮ ಪರಿಕ್ರಮ.

**ತಾ.29-11-2009 ಭಾನುವಾರ**
: ಬೆಳಿಗ್ಗೆ 10ರಿಂದ ಸಂಜೆ 5ರ ವರೆಗೆ ಸೌಂದರ್ಯಲಹರೀ ಅಖಂಡ ಪಾರಾಯಣ. 30ನೇ ಶ್ಲೋಕ (ಸ್ವದೇಹೋದ್ಭೂತಾಭಿಃ) ಎಂಬ ಶ್ಲೋಕವನ್ನು ಮನನ ಮಾಡಿ ಅಖಂಡ ಪಾರಾಯಣ ಮಾಡುವುದು.

**ತಾ.30-11-2009 ಸೋಮವಾರ** : ಕ್ಷೇಮಂಕರಿ ಪ್ರಾರ್ಥನೆ – 44ನೇ ಶ್ಲೋಕವನ್ನು (ತನೋತು ಕ್ಷೇಮಂನಃ) ಓದಿ ಒಂದು ಬಾರಿ ಸೌಂದರ್ಯಲಹರೀ ಪಾರಾಯಣ ಮಾಡಿ ಶ್ರೀ ಶಂಕರನಮನಮ್ ಹಾಗೂ ಮಾತೆಯೊಬ್ಬರಿಂದ ಆಚಾರ್ಯರ ಕುರಿತಾಗಿ ಉಪನ್ಯಾಸ ಏರ್ಪಡಿಸಿ ಸಪ್ತಾಹ ಮುಕ್ತಾಯಗೊಳಿಸುವುದು.

**ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆಗಳು :**

| | |
|---|---|
| ಶ್ರೀಮತಿ ಇಂದಿರಾ ಕರಣಿಕ, ದೊಡ್ಡಣಗುಡ್ಡೆ | 9448348666 |
| ಶ್ರೀಮತಿ ಶಂಕರಿ ರಾಮಭಟ್ಟ, ಕುಂಜಿಬೆಟ್ಟು | 9448581952 |
| ಶ್ರೀಮತಿ ಶಾರದಾ ಹೆಗಡೆ, ವಳಕಾಡು | 9845516512 |
| ಶ್ರೀಮತಿ ಜಯಲಕ್ಷ್ಮೀ ಮುರಳೀಧರರಾವ್, ಕುಂಜಿಬೆಟ್ಟು | 0820-4290305 |
| ಶ್ರೀಮತಿ ಉಮಾ ಅಡಿಗ, ಬಾರಕೂರು | 9880720647 |


**Buying and selling shares as easy as checking your emails**

**Sharekhan Online Trading Account Features:**
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL-IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23109924)


## ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.), ಉಡುಪಿ.

ಎಲ್.ನಂ.31017, ವಾದಿರಾಜ ರಸ್ತೆ, ಉಡುಪಿ - 1. ಫೋನ್ : 2522408

### ಬೇಕಾಗಿದ್ದಾರೆ

ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)ಯಲ್ಲಿ ಕ್ಲಾರ್ಕ್ (Clerk) ಹುದ್ದೆಗೆ ಕಂಪ್ಯೂಟರ್ ಅನುಭವವಿರುವ ಪದವೀಧರ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಆಸಕ್ತ ಅಭ್ಯರ್ಥಿಗಳು ತಮ್ಮ ವಯಸ್ಸು, ವಿದ್ಯಾರ್ಹತೆ (ಅಂಕಪಟ್ಟಿಯ ಪ್ರತಿಯೊಂದಿಗೆ), ದೂರವಾಣಿ ಸಂಖ್ಯೆ ಇತ್ಯಾದಿ ವಿವರಗಳೊಂದಿಗೆ ತಮ್ಮ ಅರ್ಜಿಯನ್ನು ತಾ.20-12-2009ರ ಒಳಗಾಗಿ ತಲುಪುವಂತೆ ಮೇಲೆ ತಿಳಿಸಿದ ವಿಳಾಸಕ್ಕೆ ಪ್ರತ್ಯಕ್ಷವಾಗಿ ಅಥವಾ ಅಂಚೆ ಮೂಲಕ ಸಲ್ಲಿಸುವಂತೆ ಕೇಳಿಕೊಳ್ಳಲಾಗಿದೆ.

ವಿ.ಸೂ. : ವಿಳಾಸದಲ್ಲಿ ದೂರವಾಣಿ ಸಂಖ್ಯೆ ನಮೂದಿಸಬೇಕು.

– ಕಾರ್ಯದರ್ಶಿ

## ಶ್ರೀಶಾರದಾ ದೇವಸ್ಥಾನದಲ್ಲಿ ಪ್ರತಿ ಬುಧವಾರ ಸೌಂದರ್ಯಲಹರೀ ಪಾರಾಯಣ



ಆಚಾರ್ಯ ಶಂಕರಭಗವತ್ಪಾದರಿಂದ ರಚಿತವಾದ ಸೌಂದರ್ಯಲಹರೀ ಸ್ತೋತ್ರವು ಸ್ತೋತ್ರಗಳಲ್ಲಿಯೇ ವಿಶಿಷ್ಟವಾದದ್ದು. ಇದು ಶಕ್ತಿ, ವಿದ್ಯೆ ಹಾಗೂ ಲಕ್ಷ್ಮೀಸ್ವರೂಪಿಣಿಯಾದ ವಿಶ್ವಮಾತೆಯನ್ನು ಕುರಿತಾದ ಸ್ತೋತ್ರ. ಇದರ ಒಂದು ಪದ್ಯದಲ್ಲಿ ಆಚಾರ್ಯರು-''ತಾಯೀ! ನೀನು ಸರಸ್ವತೀ, ಲಕ್ಷ್ಮೀ, ಪಾರ್ವತೀ ಮಾತ್ರವಾಗಿರದೆ ಇವೆಲ್ಲವನ್ನು ಮೀರಿದ ತುರೀಯಳೂ ಪರಮಾನಂದಸ್ವರೂಪಳೂ, ಪರಬ್ರಹ್ಮನ ಶಕ್ತಿಯೂ ಆಗಿದ್ದೀಯೆ''-ಎಂದು ವರ್ಣಿಸುತ್ತಾರೆ. ಸಾಕಾರವಾಗಿ ಪೂಜೆಗೊಳ್ಳುವ ಅನೇಕ ದೇವಾನುದೇವತೆಗಳ ನಿರಾಕಾರ ಮೂಲಸ್ತೋತ್ರ ಅವಳು. ಆದ್ದರಿಂದ ಜಗನ್ಮಾತೆಯ ಅರ್ಚನೆ ಸಕಲದೇವತೆಗಳ ಅರ್ಚನೆ. ನಾನಾ ದೇವತೆಗಳ ಆಕಾರವನ್ನೇ ನೆಚ್ಚಿಕೊಂಡು ಆ ಮೂಲಕ ವಿಚ್ಛಿದ್ರತೆಯತ್ತ ಸಾಗುತ್ತಿರುವ ಸಮಾಜದಲ್ಲಿ ದೇವಿಯ ಆರಾಧನೆ ಭಾವೈಕ್ಯವನ್ನು ಭದ್ರಗೊಳಿಸುವ ದಿವ್ಯೌಷಧವಾಗಬಲ್ಲದು. ಅದೂ ಅಲ್ಲದೆ, ಇದು ಕೇವಲ ಸ್ತೋತ್ರಮಾತ್ರವಾಗಿರದೆ ಇದರಲ್ಲಿಯ ಒಂದೊಂದು ಪದ್ಯವೂ ಒಂದೊಂದು ಮಂತ್ರವಾಗಿದೆ. ಬಲ, ವಿದ್ಯೆ, ಸಂಪತ್ತು, ಸಂಗೀತ ನೈಪುಣ್ಯ, ಪುತ್ರಪ್ರಾಪ್ತಿ, ಆರೋಗ್ಯಭಾಗ್ಯ, ಜ್ವರ ಮತ್ತು ಗ್ರಹದೋಷಗಳ ನಿವಾರಣೆ ಇವುಗಳಿಗೆ ಸಾಧಕರು ಈ ಸ್ತೋತ್ರಗಳನ್ನು ಪಠಿಸಿ ಫಲವನ್ನು ಪಡೆದಿದ್ದಾರೆ. ತಮ್ಮ ಅನುಭವವನ್ನು ಇತರರೊಡನೆ ಹಂಚಿಕೊಂಡಿದ್ದಾರೆ. ಸೌಂದರ್ಯಲಹರಿಯ ಪಾರಾಯಣಕ್ಕೆ ಜಾತಿ-ಮತ-ವಯಸ್ಸು-ಲಿಂಗಗಳ ನಿಯಮವಿಲ್ಲ. ಯಾರಾದರೂ ಸರಿಯೆ ನಿಶ್ಚಲಭಕ್ತಿಯಿಂದ ಇದನ್ನು ಪಠಿಸಿ ಮನಃಶಾಂತಿಯನ್ನು ಪಡೆದುಕೊಳ್ಳಬಹುದಾಗಿದೆ ಎಂದು ವೇದಾಂತಭಾರತೀ ಮೈಸೂರು ಇವರಿಂದ ಪ್ರಕಟಿತ ''ಸೌಂದರ್ಯಲಹರೀ'' ಎಂಬ ಪುಸ್ತಕದಲ್ಲಿ ತಿಳಿಸಲಾಗಿದೆ.

**ಪ್ರತಿ ಬುಧವಾರ ಸಂಜೆ ಗಂಟೆ 5-00ರಿಂದ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದ ಶ್ರೀ ಶಾರದಾ ದೇವಸ್ಥಾನದಲ್ಲಿ ಶ್ರೀ ಶಂಕರಭಗವತ್ಪಾದ ವಿರಚಿತ ಪುಣ್ಯ ಕೃತಿ ಶ್ರೀ ದೇವಿ ಸ್ತೋತ್ರ "ಸೌಂದರ್ಯಲಹರೀ" ಪಾರಾಯಣ ನಡೆಯುತ್ತಿದೆ. ನಮ್ಮ ಸಮಾಜ ಬಾಂಧವರು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕೆಂದು ವಿನಂತಿ.**

– ಮಹಿಳಾ ವೇದಿಕೆ


ನಮ್ಮಲ್ಲಿ ಹೋಮ, ಹವನ, ಶ್ರಾದ್ಧ ಇತ್ಯಾದಿ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ನಡೆಸಿಕೊಡಲಾಗುವುದು ಹಾಗೂ (ಹೊರಗಿನ) ಮದುವೆ, ಉಪನಯನ ಇತ್ಯಾದಿ ವಿಶೇಷ ಸಮಾರಂಭಗಳಿಗೆ ಕ್ಯಾಟರಿಂಗ್ ವ್ಯವಸ್ಥೆಯನ್ನು ಮಾಡಲಾಗುವುದು.

ಸಂಪರ್ಕಿಸಿರಿ :
**ಕೆ. ರಾಮಮೂರ್ತಿ ಭಟ್**, ಪುರೋಹಿತರು
ಶಾರದಾ ಕೃಪಾ, ಆತ್ರಾಡಿ, ಉಡುಪಿ ತಾಲೂಕು. ಮೊಬೈಲ್ : 9448108010

**ದೇವಿಕೃಪಾ ಏಜೆನ್ಸೀಸ್, ನಂದಿಕೂರು**

ಫೋನ್ : 2556536 (R), 2555466 (O)

**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**



**ಪ್ರೊ.। ಎಸ್. ಜನಾರ್ದನ್ ರಾವ್**
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು


Owned & Published by : K. Venugopal Rao, Secretary Sthanika Dravida Brahmana Sangha (R.), Shri Sharada Mantapa, Kunjibettu, Udupi - 576 102. Ph : 0820-2520754
Edited by Y. Mohan Rao, Designed @ SriNidhi Computer Graphics, Bailur, Udupi, Printed at Agrahara Offsets, Udupi - 576 101. E-mail : srisharadaudupi@yahoo.co.in Website : www.srisharada.org